ಕರ್ನಾಟಕ ವಿಧಾನಸಭೆ
ಬುಧವಾರ 14ನೇ ಮಾರ್ಚ್ 2007ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 19 ನಿಮಿಷಕ್ಕೆ ಸಮಾವೇಶಗೊಂಡಿತ್ತು
ಅಧ್ಯಕ್ಷರು (ಶ್ರೀ ಕೃಷ್ಣ ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

1) ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ ಎರಡು ದಿನಗಳ ಮುಂಚೆಯೇ ಸದನವನ್ನು ಕರೆದಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರೆ, ಈ ಸಭೆ ಕರೆದಿರುವ ಉದ್ದೇಶವೇನು ?

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಅಧ್ಯಕ್ಷರೆ, ತಾವು 16ನೇ ತಾರೀಖು ಮಾರ್ಚ್ ಬಜೆಟ್ ಮಂಡನೆ ಇದೆ ಎಂದು ಅಡ್ಜರ್ನ್ ಮಾಡಿದಿರಿ ತದನಂತರ ಸರ್ವಪಕ್ಷದ ಸಭೆ ಕೂಡ ಆಯಿತು ಕಾವೇರಿ ಬಗ್ಗೆ ಚರ್ಚೆಯಾಗಿ, ಮೊಟ್ಟಮೊದಲ ಬಾರಿಗೆ ಸರ್ವಪಕ್ಷದ ಸಭೆಯಲ್ಲಿ ಸರ್ವಾನುಮತದಿಂದ ಸರ್ಕಾರ ತೆಗೆದುಕೊಳ್ಳುವ ನಿರ್ಣಯಕ್ಕೆ ನಾವು ಬದ್ಧರಾಗಿದ್ದೇವೆ ಎಂದು ನಿರ್ಣಯವಾಗಿ, ಮಾನ್ಯ ಖರ್ಗೆಯವರು, ಮಾನ್ಯ ಸಿದ್ದರಾಮಯ್ಯನವರು ಆ ಸಭೆಯಲ್ಲಿದ್ದರು ಆಗ ಕಾವೇರಿ ಬಗ್ಗೆ ಏನೂ ನಿರ್ಣಯ ತೆಗೆದುಕೊಳ್ಳುತ್ತಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜರು ಸಭಾತ್ಯಾಗ ಮಾಡಿದರು ಮಾನ್ಯ ಮಾಧುಸ್ವಾಮಿ, ಉಳಿದೆಲ್ಲ ಸರ್ವ ಪಕ್ಷದವರು ಅದರಲ್ಲಿ ಭಾಗವಹಿಸಿದ್ದರು 16 ನೇ ತಾರೀಖು ಆಗತಕ್ಕ ಬಜೆಟ್ ಮಂಡನೆಗೆ ಇವತ್ತಿನ ದಿವಸದಿಂದ ಅಧಿವೇಶನ ಕರೆದಿದ್ದೀರಿ ಬೆಳಗಾಂನಲ್ಲಿ ಮಾನ್ಯ ಪ್ರಕಾಶ್ ಅವರು ಒಂದು ಹೇಳಿಕೆಯನ್ನು ಕೊಟ್ಟರು ನಾವು 16ನೇ ತಾರೀಖು ಮೊದಲನೇ ದಿನ ಕಾವೇರಿ ಬಗ್ಗೆ ಚರ್ಚೆ ಮಾಡುವ ವಿಶೇಷ ಅಧಿವೇಶನವನ್ನು ಕರೆಯುತ್ತೀರಿ, ಎಂದು ನಿನ್ನೆಯವರೆಗೂ ನಾವು ಕಾಯುತ್ತಿದ್ದೆವು ಏತಕ್ಕಾಗಿ ಕಾಯುತ್ತಿದ್ದೆವು, ಇವತ್ತು ತಮ್ಮಿಂದ ಅಜೆಂಡಾ ಬರಲಿಲ್ಲ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೇನು? ಇವತ್ತು ಇಡೀ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗೂ ಪ್ರತಿಭಟನೆ ನಡೆಯುತ್ತಿದೆ ಇವತ್ತು ರಾಜ್ಯದಲ್ಲಿ ಉದ್ದಕ್ಕೂ ಕೂಡ ಬೆಂಕಿ ಹತ್ತಿದೆ ದೆಹಲಿಯವರೆಗೂ ಕೂಡ ಪ್ರತಿಭಟನೆ ಆಗಿದೆ ಮತ್ತೆ ಪ್ರಧಾನ ಮಂತ್ರಿಗಳು ಕೂಡ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಇತ್ಯರ್ಥ ಮಾಡುತ್ತೇನೆಂದು, ನಿನ್ನೆ ಕೂಡ ಆಶ್ವಾಸನೆಯನ್ನು

ಕೊಟ್ಟಿದ್ದಾರೆ ಇವತ್ತು ನಾವ್ಯಾಕೆ ಪ್ರಸ್ತಾಪ ಮಾಡುತ್ತಿದ್ದೇವೆಂದರೆ, ಇವತ್ತಿನ ದಿವಸ ಈ ಸದನದಲ್ಲಿ ಕಾವೇರಿ ಬಗ್ಗೆ ಚರ್ಚೆ ಆಗಬೇಕು ಕಾವೇರಿ ಬಗ್ಗೆ ಒಂದು resolution ಅನ್ನು ನಾವು ವಿರೋಧ ಪಕ್ಷದ ಪರವಾಗಿ ಎಲ್ಲ ಸದಸ್ಯರೂ ಕೂಡ ನಾವು ಮಂಡನೆ ಮಾಡುತ್ತೇವೆ ಇದರ ಬಗ್ಗೆ ಶಕ್ತಿ ಸಿಗುತ್ತದೆ ಎಂದು ಭಾವಿಸಿದ್ದೆವು ಆದರೆ ಯಾವಾಗಲೂ ಕೂಡ ಮುಖ್ಯಮಂತ್ರಿಗಳಲ್ಲಿ escapism ಅನ್ನು ನೋಡುತ್ತಿದ್ದೇವೆ ಮಾನ್ಯ ಮುಖ್ಯ ಮಂತ್ರಿಗಳು ಜಟಿಲವಾದ ಸಮಸ್ಯೆಗಳು ಬಂದಾಗ ಹಾಜರು ಇರುವುದಿಲ್ಲ ನಾವು ಯಾರಿಗೆ ಹೇಳಬೇಕು? ತಾವು ಕೂಡ ಕಾವೇರಿ ಜಲಾನಯನ ಪ್ರದೇಶದಿಂದ ಬಂದಿದ್ದೀರಿ ಇವತ್ತು ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಿ ಒಮ್ಮತದ ನಿರ್ಣಯ ಆಗಬೇಕೆನ್ನುವ ರೀತಿಯಲ್ಲಿ ಇನ್ನು ಕೂಡ ಶಕ್ತಿ ಬರುತ್ತದೆ, ನಿಮಗೆ irrigation experts ಏನು ಹೇಳಿದ್ದಾರೊ, ಗೊತ್ತಿಲ್ಲ ಇವತ್ತು ನ್ಯಾಯವಾದಿಗಳು ಏನು ಹೇಳಿದ್ದಾರೊ, ಗೊತ್ತಿಲ್ಲ ಇದರ ಬಗ್ಗೆ ಒಂದು ಸಭೆಯನ್ನು ಕೂಡ ಕರೆದಿಲ್ಲ ಪೂರ್ವಭಾವಿಯಾಗಿ ತಮ್ಮ ಕೊರಡಿಯಲ್ಲಿ ಕೂಡ ಇವತ್ತು ಬಿಲ್‌ಗಳನ್ನು ಹಾಕಿದ್ದೇವೆಂದರೆ ಹೇಗೆ? ಇದು ಯಾವ ರೀತಿ ಸರಿ? ನಾನು ಹೇಳುತ್ತೇನೆ, ಇದು ವಿಧಾನಸಭೆಯ ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ಈ ರೀತಿಯ ಕಾರ್ಯಕ್ರಮಗಳು ನಡೆಯುತ್ತಿವೆ ನಾವೇನು 14, 16ನೇ ತಾರೀಖು ಬಜೆಟ್ ಮಂಡನೆ ಪೂರ್ವಭಾವಿಯಾಗಿ ಏನು 14, 15ರಂದು ಕೇವಲ ಬಿಲ್‌ಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದಿದ್ದೇವಾ? ಇವತ್ತು ಹೇಗಾದರೂ ಕೂಡ ಬಜೆಟ್ ಸೆಷನ್ ನಡೆಯುತ್ತಿದೆ ಬಜೆಟ್ ಸೆಷನ್‌ನಲ್ಲಿ ಇದೆಲ್ಲ ಬಿಲ್‌ಗಳು ಬರುತ್ತಿದ್ದವು, ಅವುಗಳನ್ನು ಪಾಸ್ ಮಾಡತಕ್ಕ ರೀತಿಯಲ್ಲಿ ನಾವು ಕೂಡ participate ಮಾಡುತ್ತಿದ್ದೆವು ಅದಕ್ಕೆ ನಾನು ಸಭಾಧ್ಯಕ್ಷರಲ್ಲಿ ಕೇಳುತ್ತಿದ್ದೇನೆ, ನಾವು ಇವತ್ತಿನ ದಿವಸ ಒಂದು resolution, ಮೂವ್ ಮಾಡುತ್ತಿದ್ದೇವೆ, ಅದು ಸದನದಲ್ಲಿ ಚರ್ಚೆ ಆಗಬೇಕು ಇದಕ್ಕೆ ಎಲ್ಲರೂ ಕೂಡಿ ಒಂದೇ ಮನಸ್ಸಿನಿಂದ ನಿರ್ಣಯ ಮಾಡಬೇಕು ಕಾವೇರಿ ಬಗ್ಗೆ ತೀರ್ಪು ಬರುವುದಕ್ಕೆ ಮುಂಚೆ, ಮುಖ್ಯಮಂತ್ರಿಗಳು ಸಭೆಯನ್ನು ಕರೆದಿದ್ದರು, ನಾವು ಅದಕ್ಕೆ ಹಾಜರಾಗಿದ್ದೆವು ತೀರ್ಪು ನಿಮ್ಮ ವಿರುದ್ಧವಾಗಿದೆ, ಏಕೆ ಕರೆದಿರಿ ಎಂದು ಕೇಳಿದೆವು ಅದಕ್ಕೂ ಹೋಗಿದ್ದೇವೆ ತೀರ್ಪು ಬಂದ ಮೇಲೆ ಕರೆದ ಸಭೆಗೆ ಹೋಗಿದ್ದೇವೆ ತದನಂತರ judgment copy ಯನ್ನು ಕೈಯಲ್ಲಿ ಕೊಡುತ್ತೇವೆ, ಸರ್ವ ಪಕ್ಷದ

ಸಭೆಯಲ್ಲಿ ಕೂಡ ಭಾಗವಹಿಸಿದ್ದೇವೆ ಪ್ರತಿ ಹಂತದಲ್ಲಿ ಸರ್ಕಾರ ತೆಗೆದುಕೊಳ್ಳುವ ಏನು ಒಂದು ನಿರ್ಣಯ ಇದೆ, ಅದಕ್ಕೆ ವಿರೋಧ ಪಕ್ಷದವರು ಅದರ ಬಗ್ಗೆ ಸಾಕಷ್ಟು ಹೇಳತಕ್ಕದ್ದು ಇದೆ ಇವತ್ತು ರಾಜಕೀಯವಾಗಿ ಯಾವ ರೀತಿಯಾಗಿ ಬಳಸಿದ್ದಾರೆ, ಬೇರೆ ಕಡೆಗೆ ಇದ್ದರೂ ಕೂಡ ರಾಜ್ಯದ ಹಿತದೃಷ್ಟಿಯಿಂದ ಇವತ್ತು ರೈತರ ಸಮಸ್ಯೆ, ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಜನರಿಗೆ ಏನು ಮರಣ ಶಾಸನವಾಗಿದೆ, ಅದರ ಬಗ್ಗೆ ನಾವು ಪಕ್ಷ ಭೇದ ಎಲ್ಲವನ್ನೂ ಮರೆತು ಯಾವ ರೀತಿಯಾಗಿ ಸರ್ಕಾರ ನಡೆಸುತ್ತಿದ್ದಾರೆ ಎಂದು ಸಾಕಷ್ಟು ವಿಷಯಗಳು ಚರ್ಚೆ ಮಾಡಬೇಕಾಗಿದೆ ಆದರೂ ಕೂಡ ನಾವು ಇದರ ಬಗ್ಗೆ ಹೆಚ್ಚಿನ ಸಹಕಾರವನ್ನು ಕೊಟ್ಟಿದ್ದೇವೆ ಅದಕ್ಕೆ ನಾವು

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೇ, ಸರ್ಕಾರ ಏನು ಹೇಳುತ್ತದೋ ನೋಡೋಣ

ಶ್ರೀ ವಾಟಾಳ್ ನಾಗರಾಜ್ ನಮ್ಮನ್ನೂ ಕೇಳಿಬಿಡಿ, ಒಂದು ನಿಮಿಷ

ಅಧ್ಯಕ್ಷರು ವಿರೋಧ ಪಕ್ಷದ ನಾಯಕರು ಹೇಳುತ್ತಲೇ ಇದ್ದಾರೆ, ಅವರು ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್, ನಾವು ನಿಮ್ಮಿಂದ ಉತ್ತರ ಕೇಳುವುದಕ್ಕೆ ನಿಂತಿದ್ದೇವೆ

ಶ್ರೀ ಧರ್ಮಸಿಂಗ್ "ಕಾವೇರಿ ನ್ಯಾಯಾಧಿಕರಣ ದಿನಾಂಕ 05 02 2007 ರಂದು ತನ್ನ ಅಂತಿಮ ತೀರ್ಪನ್ನು ನೀಡಿದೆ ಈ ತೀರ್ಪಿನಿಂದ ಕರ್ನಾಟಕ ರಾಜ್ಯಕ್ಕೆ ಅಪಾರ ಅನ್ಯಾಯವಾಗಿದೆ ಈ ತೀರ್ಪನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಮತ್ತು ಕಾವೇರಿ ಜಲವಿವಾದದಲ್ಲಿ ರಾಜ್ಯದ ರೈತರ ಹಿತಾಸಕ್ತಿಯನ್ನು ಮತ್ತು ಬೆಳೆಯುತ್ತಿರುವ ಬೆಂಗಳೂರು ಮತ್ತು ಕಾವೇರಿ ನೀರನ್ನು ಆಧರಿಸಿರುವ ಇತರೆ ನಗರಗಳ ಕುಡಿಯುವ ನೀರಿನ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು, ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹೋರಾಟವನ್ನು ರಾಜ್ಯ ಮುಂದುವರೆಸಿಕೊಂಡು ಹೋಗಲು ಈ ಸದನ ಸರ್ವಾನುಮತದಿಂದ ಸರ್ಕಾರವನ್ನು ಒತ್ತಾಯಿಸುತ್ತದೆ" ಎನ್ನುವ ನಿರ್ಣಯದ ಬಗ್ಗೆ ಚರ್ಚೆ ಆಗಬೇಕು ಈ Resolution Move ಮಾಡಿದ್ದೇನೆ ಇದರ ಬಗ್ಗೆ ಚರ್ಚೆಯಾಗಬೇಕು

ಅಧ್ಯಕ್ಷರು ಅದಕ್ಕೆ ನಾನು ಕೇಳೋಣವೆಂದಿದ್ದು ನಿರ್ಣಯ ಎಂದರೆ ನಿಯಮಾವಳಿಗಳ ಪ್ರಕಾರ ಏಳು ದಿವಸ ಆದಮೇಲೆ ಅದು ಚರ್ಚೆಗೆ

ಬರತಕ್ಕಂಥದ್ದು, ಏಳು ದಿವಸ ಮೊದಲೇ ಕೊಡಬೇಕೆಂದು ಇದೆ ಆದ್ದರಿಂದ ಸರ್ಕಾರ ಏನು ಹೇಳುತ್ತದೋ ಕೇಳೋಣವೆಂದು ಅದಕ್ಕೆ ನಾನು ಹೇಳಿದ್ದು

ಶ್ರೀ ವಾಟಾಳ್ ನಾಗರಾಜ್ ಮೂಲಭೂತವಾಗಿ ತಾವು ಸದನವನ್ನು ಏಕೆ ಕರೆದಿರಿ ಎಂದು ಮೊದಲು ಹೇಳಿ ಸದನ ಕರೆಯುವುದಕ್ಕೆ ನಿಮಗೆ ಅಧಿಕಾರವನ್ನು ಕೊಟ್ಟವರು ಯಾರು? ಸದನವೆಂದರೆ ಏನು ತಿಳಿದುಕೊಂಡಿದ್ದೀರಿ? ಏನಿದು ಹುಡುಗಾಟವೇ?

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಪಂಚಾಯಿತಿ ಮೀಟಿಂಗ್ ಕೂಡ ಒಂದು ವಾರ ಟೈಮ್ ಕೊಟ್ಟು ಕರೆಯುತ್ತಾರೆ ಇದೇನು ತಮಾಷೆಯಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಎರಡು ದಿವಸ ಇದ್ದಕ್ಕಿದ್ದ ಹಾಗೆ ಅಧಿವೇಶನ ಕರೆಯಲು ಇದೇನು, ದಿವಾಳಿಯಾ? ಇದೇನು ಹುಡುಗಾಟ? ಏತಕ್ಕೋಸ್ಕರ ಕರೆದಿದ್ದೀರಿ? ಯಾರನ್ನು ಕೇಳಿದ್ದೀರಿ?

ಶ್ರೀ ಜೆ ಸಿ ಮಾಧುಸ್ವಾಮಿ 16ನೇ ತಾರೀಖು ಎಂದು ನಮಗೆ ನೋಟೀಸನ್ನು ಕಳುಹಿಸುತ್ತೀರಿ 14ನೇ ತಾರೀಖು ಎಂದು ನಿನ್ನೆ ಕಳುಹಿಸುತ್ತೀರಿ, ಇದೇನು ತಮಾಷೆಯೇ? ಯಾರು ಸಭೆಯನ್ನು ಕರೆಯಬೇಕಾದ್ದು?

ಶ್ರೀ ವಾಟಾಳ್ ನಾಗರಾಜ್ ಉಚ್ಚ ನ್ಯಾಯಾಲಯದವರು ತೊಘಲಕ್ ದರ್ಬಾರ್ ಎಂದು ಹೇಳುತ್ತಿದ್ದಾರೆ ಆ ಚುನಾವಣೆ ವಿಚಾರದಲ್ಲಿ ಇದು ತೊಘಲಕ್ ದರ್ಬಾರ್ ಇದು ತೊಘಲಕ್ ದರ್ಬಾರ್‌ಗಿಂತ ಕಡೆಯಾಗಿದೆ ಇದು

ಶ್ರೀ ಜೆ ಸಿ ಮಾಧುಸ್ವಾಮಿ ತಾವು 16ನೇ ತಾರೀಖು ಸಭೆ ಕರೆದಿದ್ದೇವೆಂದು ನೋಟೀಸನ್ನು ಕೊಡುತ್ತೀರಿ ಮತ್ತೆ 14ನೇ ತಾರೀಖು ಎಂದರೆ, what is the emergency? What is the emergency in calling it earlier? ನೀವು ಸಭೆಯನ್ನು ನಡೆಸುವವರು Government ಅಲ್ಲ ಅವರು ಹೇಳಿದ್ದನ್ನು ಕೇಳುವುದಕ್ಕೆ ನಾವು ಇಲ್ಲಿ ಕೂತಿಲ್ಲ No, we are not here to seek Government's order ತಾವು 16ನೇ ತಾರೀಖು ಶಾಸನಸಭೆಯನ್ನು ಕರೆದು ನೋಟೀಸ್ ಅನ್ನು ಕೊಟ್ಟಿದ್ದೀರಿ

ಅಧ್ಯಕ್ಷರು ಬಹಳ ಮುಖ್ಯವಾದ

ಶ್ರೀ ಜೆ ಸಿ ಮಾಧುಸ್ವಾಮಿ ಬಹಳ ಮುಖ್ಯವಾದ್ದು ಏನು ಹೇಳಿ? ಹತ್ತಿಕೊಂಡು ಉರಿಯುತ್ತಿದೆಯಾ ಈ ರಾಜ್ಯ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ನಿಮ್ಮ ಅಜೆಂಡಾ ಪ್ರಕಾರ ಮುಖ್ಯ ಏನೂ ಇಲ್ಲ ಸಭೆ ಕರೆಯುವುದು ನಿಮಗೂ ಗೊತ್ತಿಲ್ಲ ಅಧ್ಯಕ್ಷರನ್ನು ಮೂಲೆಗುಂಪು ಮಾಡಿದ್ದಾರೆ

(ಗೊಂದಲ)

ಶ್ರೀ ಸಿದ್ದರಾಮಯ್ಯ ಮಾಧುಸ್ವಾಮಿ ಮತ್ತು ವಾಟಾಳ್ ನಾಗರಾಜ್ ಅವರು ಎತ್ತಿರತಕ್ಕ ಪ್ರಶ್ನೆಗಳು ಸರಿಯಾಗಿದೆ ನಾವೆಲ್ಲ ಕಾವೇರಿ ತೀರ್ಪಿನ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರವಾಗಿ 14 ಮತ್ತು 15ನೇ ತಾರೀಖು ಎರಡು ದಿವಸ ಕರೆದಿದ್ದಾರೆಂದು ನಾವು ತಿಳಿದುಕೊಂಡಿದ್ದೆವು

ಶ್ರೀ ಜೆ ಸಿ ಮಾಧುಸ್ವಾಮಿ ಹಾಗಂತ ಎಲ್ಲಿದೆ ಸಾರ್, ನೋಟೀಸ್‌ನಲ್ಲಿ?

ಶ್ರೀ ಸಿದ್ದರಾಮಯ್ಯ ಅಜೆಂಡಾನೆ ಇಲ್ಲ ಈಗ ನಾನು ಮಸೂದೆಗಳನ್ನು ತರಬಾರದೆಂದು ಹೇಳುವುದಿಲ್ಲ 16ನೇ ತಾರೀಖು ಬಜೆಟ್ ಮಂಡಿಸುವುದಕ್ಕೆ ಕರೆದಿದ್ದೀರಿ ನೀವು 5ನೇ ತಾರೀಖಿನವರೆಗೂ ನಡೆಯುತ್ತದೆ ಎಂದು ಹೇಳಿದ್ದೀರಿ ಅಷ್ಟರೊಳಗೆ ಮಸೂದೆಯನ್ನು ತರಬಹುದಾಗಿತ್ತು ಚರ್ಚೆ ಮಾಡಿ ಪಾಸು ಮಾಡಬಹುದಾಗಿತ್ತು ಇಷ್ಟೊಂದು ತರಾತುರಿಯಲ್ಲಿ ಕಾವೇರಿ ತೀರ್ಪನ್ನು ಕೂಡ ಹಿಂದಕ್ಕೆ ಹಾಕಿ ಈ ಮಸೂದೆಗಳನ್ನು ತೆಗೆದುಕೊಂಡು ಬಂದಿದ್ದೀರಿ ಇದನ್ನು ಈ ರಾಜ್ಯದ ಜನರು ಮೆಚ್ಚುತ್ತಾರಾ? ಒಪ್ಪುತ್ತಾರಾ? ಈ ಅಧಿಕಾರ ಎಲ್ಲಿಂದ ಬಂತು ನಿಮಗೆ?

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಪ್ರಸ್ತಾಪವನ್ನು ಮಾಡಿದೆ ಎರಡು–ಮೂರು ದಿವಸ ಮೊದಲೇ ಕರೆಯಿರಿ ಸಾರ್ ಎಂದೆ ಅವತ್ತು ಆಗುವುದಿಲ್ಲವೆಂದು ಹೇಳಿದರು ಬಜೆಟ್ 16ಕ್ಕೆ ಇಡಿ, 12ಕ್ಕೋ 13ಕ್ಕೋ ಶಾಸನ ಸಭೆಯನ್ನು ಕರೆದು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿರೋಣವೆಂದು ಹೇಳಿದೆ No, at any cost 16ನೇ ತಾರೀಖು meet ಆಗಬೇಕೆಂದು ನಮಗೆ ಹೇಳಿ, ನಾವೆಲ್ಲ ಬೇರೆ ಬೇರೆ ಕಾರ್ಯಕ್ರಮಗಳನ್ನು, ಮೀಟಿಂಗ್ ಅನ್ನು ಹಾಕಿಕೊಂಡಿದ್ದಾಗ ನಿನ್ನೆ ದಿವಸ ತಾವು ಹೀಗೆ ನೋಟೀಸ್ ಅನ್ನು ಕೊಡುತ್ತೀರಲ್ಲ

ಶ್ರೀ ಸಿದ್ದರಾಮಯ್ಯ ಮತ್ತೆ 14, 15ಕ್ಕೆ ಕರೆಯಬೇಕಾದರೆ, ನೋಟೀಸನ್ನು ಕೊಟ್ಟಿದ್ದೀರಾ? ನಮ್ಮ ನಿಯಮಾವಳಿ ಪ್ರಕಾರ ಎಷ್ಟು ದಿವಸ

ನೋಟೀಸ್ ಕೊಡಬೇಕೋ, ಆ ರೀತಿ ನೋಟೀಸನ್ನು ಕೊಟ್ಟಿದ್ದೀರಾ? ಅದೂ ಇಲ್ಲ ಹೋಗಲಿ, ಬಹಳ ತುರ್ತಾಗಿದೆ, ಅತ್ಯಂತ ಅಗತ್ಯ, ಜನರ ದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಅತ್ಯಂತ ಅಗತ್ಯ ಅನ್ನತಕ್ಕಂಥದ್ದಾದರೂ ಇದೆಯಾ? ಮಸೂದೆಗಳ ಬಗ್ಗೆ ಆಮೇಲೆ ಚರ್ಚೆ ಮಾಡೋಣ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು resolution ಅನ್ನು move ಮಾಡಿದ್ದಾರೆ, ಇದು ಚರ್ಚೆ ಆಗಬೇಕು ನಾವು ಸರ್ಕಾರಕ್ಕೆ ಶಕ್ತಿಯನ್ನು ಕೊಡಲಿಕ್ಕೋಸ್ಕರ, ನಿಮ್ಮ ಕೈಗೆ ಶಕ್ತಿಯನ್ನು ಕೊಡಲಿಕ್ಕೋಸ್ಕರವಾಗಿ, ವಿರೋಧ ಪಕ್ಷದ ನಾಯಕರು ಈ ನಿರ್ಣಯವನ್ನು ಮೂವ್ ಮಾಡಿರತಕ್ಕದ್ದು ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಆಗಬೇಕು ಕಾವೇರಿ ತೀರ್ಪಿನ ಬಗ್ಗೆ ಸುದೀರ್ಘವಾಗಿ ಚರ್ಚೆ ಆಗಬೇಕು ಈ ಸದನದ ಅಭಿಪ್ರಾಯವನ್ನು ಕೂಡ ತೆಗೆದುಕೊಳ್ಳಬೇಕಾಗುತ್ತದೆ ಅಲ್ಲಿ ಸರ್ವ ಪಕ್ಷಗಳ ಸಭೆ ಕರೆದು ಸರ್ಕಾರ ಚರ್ಚೆ ಮಾಡಿದೆ ಅವತ್ತು ಕೂಡ ಒಂದು ನಿರ್ಣಯವಾಗಿದೆ ಮತ್ತು ಅವತ್ತೂ ಕೂಡ ಅಸೆಂಬ್ಲಿಯಲ್ಲಿ ಕೂಡ ಒಂದು ನಿರ್ಣಯವಾಗಬೇಕೆಂದು ಹೇಳಿ ಸಲಹೆಗಳು ಬಂದಿದ್ದವು ಅದಕ್ಕೆ ಸರ್ಕಾರ ಒಪ್ಪಿಕೊಂಡಿದೆ ಇಲ್ಲಿ ನಿರ್ಣಯ ಮಾಡಬೇಕು, ಚರ್ಚೆ ಮಾಡಬೇಕೆಂದು ಹೇಳಿ ಪಾಪ, ವಾಟಾಳ್ ನಾಗರಾಜ್ ಅವರು ಮೊದಲನೇ ದಿನದಿಂದ 5ನೇ ತಾರೀಖು ಫೆಬ್ರವರಿಯಿಂದ ಇಲ್ಲಿ ನಿರ್ಣಯ ಮೂವ್ ಮಾಡಬೇಕು, ಚರ್ಚೆ ಆಗಬೇಕು, ಸುದೀರ್ಘವಾಗಿ ಚರ್ಚೆ ಆಗಬೇಕು, ಅಭಿಪ್ರಾಯವನ್ನು ಕೇಳಬೇಕು, ಸರ್ಕಾರದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು ಅವರು ಕಾನೂನು ತಜ್ಞರ ಜೊತೆ ಏನು ಚರ್ಚೆಯನ್ನು ಮಾಡಿದ್ದಾರೆ? ನೀರಾವರಿ ತಜ್ಞರ ಜೊತೆ ಏನು ಚರ್ಚೆಯನ್ನು ಮಾಡಿದ್ದಾರೆ? ಎಂದು ಒತ್ತಾಯ ಮಾಡುತ್ತಿದ್ದಾರೆ ಏಕೆಂದರೆ, ಈಗಾಗಲೇ ಎರಡು ಮೂರು ರೀತಿಯ ಸುದ್ದಿಗಳು ಬಂದುಬಿಟ್ಟಿವೆ ಒಂದೇ ಸಾರಿ ಮೂರು ರೀತಿಯ ಪಿಟಿಷನ್‌ಗಳನ್ನು ಹಾಕುತ್ತಿದ್ದೇವೆಂದು ಚರ್ಚೆಗೆ ಬಂದಿದೆ ಯಾವ ರೀತಿ ವಕೀಲರುಗಳು ಸಲಹೆಗಳನ್ನು ಕೊಟ್ಟಿದ್ದಾರೆ, ಯಾವ ಹಿನ್ನೆಲೆಯಲ್ಲಿ ಕೊಟ್ಟಿದ್ದಾರೆ, ಎನ್ನುವ ಬಗ್ಗೆ ಚರ್ಚೆ ಆಗಬೇಕಲ್ಲ Review petition ಅನ್ನು ಒಂದೇ ಸಾರಿ ಹಾಕುತ್ತೇವೆ, Article 131ರ ಅಡಿಯಲ್ಲಿ ಹಾಕುತ್ತೇವೆ, Original suit ಅನ್ನು ಹಾಕುತ್ತೇವೆ, 136 ರಲ್ಲಿ appeal ಅನ್ನು ಹಾಕುತ್ತೇವೆ, ಎಂದು ಒಂದೇ ಸಾರಿ ಮೂರನ್ನು ಹಾಕುತ್ತೇವೆ ಎಂತಲೂ ಕೂಡ ಪತ್ರಿಕೆಯಲ್ಲಿ ಬಂದುಬಿಟ್ಟಿದೆ ಅದು ಸಾಧ್ಯವೇ? ಅಸಾಧ್ಯವೇ? It is legally

valid or Invalid? Constitutional ಆಗಿ ರೈಟಾ? ರಾಂಗಾ? ಇವೆಲ್ಲ ಚರ್ಚೆಯಾಗಿ ನಮ್ಮ ಅಭಿಪ್ರಾಯಗಳನ್ನು ಹೇಳಬೇಕಲ್ಲವೇ? ನಮಗೆ ಗೊತ್ತಿರುವ ಜ್ಞಾನ ಸ್ವಲ್ಪ ಮಟ್ಟಿಗೆ ಏನಿದೆ, ಅದನ್ನಾದರೂ ಸರ್ಕಾರಕ್ಕೆ ತಿಳಿಸಬೇಕಲ್ಲ ಆದ್ದರಿಂದ ಇದು ದೀರ್ಘವಾಗಿ ಚರ್ಚೆ ಆಗಬೇಕು ಇವತ್ತು ಇರತಕ್ಕಂಥ ಅಜೆಂಡಾಗಳನ್ನೆಲ್ಲಾ ಬದಿಗೊತ್ತಿ, ಕಾವೇರಿ ತೀರ್ಪಿನ ಬಗ್ಗೆ ಈ Resolution ಅನ್ನು ಚರ್ಚೆಗೆ ತೆಗೆದುಕೊಳ್ಳಬೇಕು ನಾನು ಆ Resolution ಅನ್ನು ಅನುಮೋದನೆ ಮಾಡುತ್ತಿದ್ದೇನೆ

ಅಧ್ಯಕ್ಷರು – ಈಗ ರೆಸಲ್ಯೂಷನ್ ಏನು ಇದೆ? ನಿಯಮಾವಳಿಗಳ ಪ್ರಕಾರ

ಶ್ರೀ ಜೆ ಸಿ ಮಾಧುಸ್ವಾಮಿ – ಯಾವ ನಿಯಮಾವಳಿ ಸಾರ್? ತಾವು ಯಾವ ನಿಯಮಾವಳಿಯಲ್ಲಿ ಈ ಸಭೆಯನ್ನು ಕರೆದಿದ್ದೀರಿ? ಅದನ್ನು ಮೊದಲು ಹೇಳಿ

ಶ್ರೀ ಸಿದ್ಧರಾಮಯ್ಯ –If there is any provision under the rules, you can take up any important matter

ಶ್ರೀ ಜೆ ಸಿ ಮಾಧುಸ್ವಾಮಿ – ಯಾವ ನಿಯಮಾವಳಿಗಳ ಪ್ರಕಾರ 14ನೇ ತಾರೀಖು ತಾವು ಸಭೆಯನ್ನು ಕರೆದಿದ್ದೀರಿ ಹೇಳಿ

ಅಧ್ಯಕ್ಷರು – ಈಗ ಏನು ವಿಷಯ ಅಂದರೆ

ಶ್ರೀ ಜೆ ಸಿ ಮಾಧುಸ್ವಾಮಿ – ಯಾವ ನಿಯಮಾವಳಿಯಲ್ಲಿ ತಾವು 16ನೇ ತಾರೀಖು ಸಭೆ ಕರೆದಿದ್ದನ್ನು 14ನೇ ತಾರೀಖು ಮಾಡಿದಿರಿ?

ಅಧ್ಯಕ್ಷರು – ನೀವೇನು ನಿರ್ಣಯ ಕಳುಹಿಸಿದ್ದೀರಿ, ಆ ನಿರ್ಣಯದ ಬಗ್ಗೆ ಹೇಳುತ್ತಿದ್ದೇನೆಯೇ ಹೊರತು ಬೇರೆ ಅಲ್ಲ ಅದಕ್ಕೆ ಸರ್ಕಾರದ ಉತ್ತರ ಏನೆಂದು ಕೇಳೋಣ

ಶ್ರೀ ಜೆ ಸಿ ಮಾಧುಸ್ವಾಮಿ – ಯಾರ್ಯಾರ ತೆವಲಿಗೆ ಬೇಕಾಗಿದೆ, ಅವರ ಸಲುವಾಗಿ ನಾವು ಬಂದು ಇಲ್ಲಿ ಕೂರಬೇಕಾ? ಶಾಸನಸಭೆ ಅಂದರೆ, ಇದು ಏನು ಕಡ್ಲೆಪುರಿ ಮಾರುವ ವ್ಯಾಪಾರವೇ? ತಾವು 16ನೇ ತಾರೀಖಿಗೆ ಸದನದ ನೋಟೀಸ್ ಕೊಟ್ಟು 14ನೇ ತಾರೀಖಿಗೆ ಸಭೆ ಕರೆದಿದ್ದೀರಲ್ಲಾ, ಯಾವ ನಿಯಮಾವಳಿಯ ಮೇಲೆ ಕರೆದಿರುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ ಯಾವ ನಿಯಮಾವಳಿಯನ್ನು ಮೀರಿ ಸರ್ಕಾರ ನಡೆದಿರುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಇದಕ್ಕೆ ಮಾನ್ಯ ಅಧ್ಯಕ್ಷರೇ ನೀವು ಉತ್ತರವನ್ನು ಕೊಡಬೇಕು

(ಗೊಂದಲ)

ಅಧ್ಯಕ್ಷರು· ಸರ್ಕಾರ ಉತ್ತರವನ್ನು ಹೇಳುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಹೇಳುವುದು ಅಲ್ಲ, ತಾವು ಹೇಳಬೇಕು

ಶ್ರೀ ವಾಟಾಳ್ ನಾಗರಾಜ್ ಅವರ ಬಗ್ಗೆ ನಮಗೆ ಗೌರವವಿದೆ, ಸಭೆ ಕರೆದವರು ನೀವು, ನೀವು ಉತ್ತರವನ್ನು ಹೇಳಬೇಕು

ಅಧ್ಯಕ್ಷರು ಅವರ ಬಗ್ಗೆ ಗೌರವವಿದೆ ಸರಿ, ಆದರೆ ಸರ್ಕಾರದ ಮಾತನ್ನು ಕೇಳಬೇಕಲ್ಲವೇ?

ಶ್ರೀ ಜೆ ಸಿ ಮಾಧುಸ್ವಾಮಿ ಕಾರ್ಯಕ್ರಮಗಳನ್ನು ಅನೌನ್ಸ್ ಮಾಡಿ ನೀವು ಸಭೆಯನ್ನು ಕರೆಯುತ್ತೀರಾ?

ಶ್ರೀ ಎಂ ಪಿ ಪ್ರಕಾಶ್ ತಾವು ಏನು ಹೇಳಬೇಕು ಅದನ್ನು ಹೇಳಿ, ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ ಈಗ ಜಗಳವನ್ನು ಮಾಡಿದಂತೆ ಏಕೆ ಮಾತನಾಡುತ್ತೀರಿ? ನಿಜವಾದ ವಿಚಾರ ಏನು ಇದೆ ಹೇಳಿ ನಾವು ಉತ್ತರವನ್ನು ಕೊಡುತ್ತೇವೆ

ಶ್ರೀ ವಾಟಾಳ್ ನಾಗರಾಜ್ – 21ನೇ ತಾರೀಖಿನಂದು ಈ ಸದನವನ್ನು 16ನೇ ತಾರೀಖಿನವರೆಗೆ ಮುಂದೂಡಿದ್ದೇವೆಂದು ನಮಗೆ ಹೇಳಿದಿರಿ ತಕ್ಷಣ ನೀವು 14ನೇ ತಾರೀಖು ಕರೆಯುವುದಕ್ಕೆ, ನಮಗೆ ಗೊತ್ತಿರುವ ಹಾಗೆ, ನಿಮಗೂ ಅದು ಗೊತ್ತಿಲ್ಲ ಯಾವ ಕಾರಣಕ್ಕೆ ಕರೆದರು? ಯಾರು ನೋಟೀಸ್ ಕೊಟ್ಟಿದ್ದಾರೆ? ಎಲ್ಲಿಗೆ ನೋಟೀಸ್ ಹೋಗಿದೆ ಈ ಸದನ ಕರೆಯತಕ್ಕಂಥ ತೀರ್ಮಾನ ತೆಗೆದುಕೊಂಡವರು ಯಾರು? ಆ ತೀರ್ಮಾನ ನಿಮಗೆ ಗೊತ್ತಾಗಿದ್ದು ಯಾವಾಗ? ಸದನ ಕರೆಯುವುದಕ್ಕೆ ನಿಮಗೆ ಗೊತ್ತಾಗಿದ್ದು ಯಾವಾಗ? ನಿಮ್ಮನ್ನೂ ನ್ನ ಕತ್ತಲಲ್ಲಿ ಇಟ್ಟಿದ್ದಾರೆ ಸದನವನ್ನೂ ಕತ್ತಲಲ್ಲಿ ಇಟ್ಟಿದ್ದಾರೆ

ಅಧ್ಯಕ್ಷರು – ನಮ್ಮನ್ನು ಕತ್ತಲಲ್ಲಿ ಇಟ್ಟಿಲ್ಲ

ಶ್ರೀ ವಾಟಾಳ್ ನಾಗರಾಜ್ – ಶಾಸಕರನ್ನೂ ಕತ್ತಲಲ್ಲಿ ಇಟ್ಟಿದ್ದಾರೆ ಖಂಡಿತ, ಸತ್ಯವನ್ನು ನಾನು ಹೇಳುತ್ತಿದ್ದೇನೆ ಸತ್ಯ ತಾನೇ ನೀವು ಈಗ ಬಾಯಿ ಬಿಟ್ಟು ಹೇಳಬೇಕು ಬಹಿರಂಗವಾಗಿ ಹೇಳಬೇಕು

ಶ್ರೀ ಕೆ ಆರ್ ರಮೇಶ್‌ಕುಮಾರ್ – ನಾನು ಅಧ್ಯಕ್ಷರಲ್ಲಿ ಇಷ್ಟೇ ನಿವೇದಿಸಿಕೊಳ್ಳುವುದು ನಮ್ಮ ಸದನದ ನಿಯಮಾವಳಿಗಳ ಪ್ರಕಾರ ಸಭೆಯ ಅಧಿವೇಶನವನ್ನು ಕರೆದು ನೀವು ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಿದಾಗ, ಅಧಿವೇಶನ prorogue ಆಗದೇ ಇದ್ದರೆ ಪುನ ಅಧಿವೇಶನವನ್ನು ಕರೆಯತಕ್ಕಂಥ ಅಧಿಕಾರ ತಮ್ಮಲ್ಲಿ ಇದೆ ತಾವು 16ನೇ ತಾರೀಖು ಎಂದು ಹೇಳಿ ಆಯೋಜಿಸಿದ್ದನ್ನು 14ರಂದು ಕರೆಯಬಹುದಾದ ಅಧಿಕಾರ ತಮ್ಮಲ್ಲಿ ಇದೆ ಆದರೆ ಯಾವ ಕಾರಣಕ್ಕಾಗಿ ಕರೆದಿರಿ ಎಂದು ಸದನಕ್ಕೆ ಉತ್ತರ ಹೇಳಬೇಕಾದ್ದು ತಾವು, ಸರ್ಕಾರವಲ್ಲ ಇದು ತಮ್ಮ ಮತ್ತು ನಮ್ಮ ಮಧ್ಯೆ ಇರತಕ್ಕ ವಿಚಾರ ಸರ್ಕಾರಕ್ಕೆ ಒಂದು ವೇಳೆ ಎರಡು ದಿವಸ ಮುಂಚಿತವಾಗಿ ಸದನ ಕರೆಯಬೇಕು, ಜರೂರಾದ ಕೆಲಸ ಇದೆ ಎಂದರೆ ಅವರು ಬಂದು ನಿಮ್ಮಲ್ಲಿ ನಿವೇದಿಸಿಕೊಂಡರೆ, ಅದನ್ನು ಗಣನೆಗೆ ತೆಗೆದುಕೊಂಡು ಆ ಕಾರಣಗಳನ್ನೇ ಮುಂದೆ ಹಾಕಿಕೊಂಡು, "ಈ ಕಾರಣಗಳಿಗೆ ನಾನು ಸಭೆಯನ್ನು ಕರೆಯುತ್ತಿದ್ದೇನೆ" ಎಂದು ಹೇಳಬಹುದಿತ್ತು ಕಾರಣಗಳನ್ನು ಹೇಳಬೇಕಾದವರು ತಾವೇ ಹೊರತು ಸರ್ಕಾರದವರಲ್ಲ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ ಕಾರ್ಯಕ್ರಮದ ಪಟ್ಟಿಯನ್ನು ನಾವು ನೋಡಿದ್ದೇವೆ ಕಾರ್ಯಕ್ರಮದ ಪಟ್ಟಿಯನ್ನು ನೋಡಿದರೆ ಅತೀ ಜರೂರಾಗಿ ಎರಡು ದಿವಸ ಮೊದಲೇ ಕರೆಯಬೇಕಾದಂತಹ ಕಾರ್ಯಕ್ರಮ, ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಏನೂ ಇಲ್ಲ ಏಕೆ ಕರೆದಿರಿ ಎಂದು ಗೊತ್ತಿಲ್ಲ ಕರೆದಿದ್ದಕ್ಕೆ ನಮಗೆ ಸಂತೋಷವಾಯಿತು, ನಾವು ಸೇರಿದ್ದೇವೆ ಹೆಚ್ಚು ದಿವಸ ಸದನ ಸೇರಬೇಕೆಂದು ನಾವೇ ಹೇಳುತ್ತೇವೆ ಒಂದು ಸಲ ಅನಿರ್ದಿಷ್ಟ ಕಾಲ ಎಂದು ಮುಂದೂಡಿದ ಮೇಲೆ ಪುನ ಸಭೆಯನ್ನು ಸಮಾವೇಶಗೊಳಿಸುವ ಅಧಿಕಾರ ತಮ್ಮಲ್ಲಿ ಇದೆ ಅಗತ್ಯ ಬಿದ್ದರೆ ಅದನ್ನು ಬದಲಾಯಿಸತಕ್ಕಂಥ ಅಧಿಕಾರವೂ ತಮ್ಮಲ್ಲಿದೆ

ಅಧ್ಯಕ್ಷರು – ಮಾನ್ಯ ರಮೇಶ್‌ಕುಮಾರ್ ಅವರೇ, ತಾವು ಕೇಳಿ ಸರ್ಕಾರದ ವತಿಯಿಂದ ಪತ್ರ ಬಂತು ಆ ಪ್ರಕಾರ ಕರೆದಿದ್ದೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ –ಒಂದೇ ನಿಮಿಷ ತಾಳ್ಮೆ ತಮಗೆ ಇರಲಿ ಈ ಸದನದ ಸಾರ್ವಭೌಮತ್ವ, ಅಧ್ಯಕ್ಷ ಸ್ಥಾನಕ್ಕೆ ಇರತಕ್ಕಂಥ ಸ್ವಾತಂತ್ರ, ಅದು ಬಹಳ ಗೌರವಯುತವಾಗಿ ಹೋಗುತ್ತಿರಬೇಕು ಸರ್ಕಾರದೊಳಗೆ ತಾವು ಸಹಕಾರವನ್ನು ನೀಡುತ್ತಾ, ಸರ್ಕಾರದ ಕಲಾಪಗಳನ್ನು ನಡೆಸಿಕೊಳ್ಳುವುದಕ್ಕೆ ಅವರಿಗೆ ಸಹಕಾರ ಹಸ್ತವನ್ನು ನೀಡುತ್ತಾ ಎಲ್ಲೋ ಒಂದು

ಕಡೆಗೆ ತಾವು ಪ್ರಜ್ಞಾಪೂರ್ವಕವಾಗಿ ತಾವು ಈ ಸದನದ ಸಾರ್ವಭೌಮತ್ವವನ್ನು, ಅಧ್ಯಕ್ಷ ಸ್ಥಾನದ ಮಹತ್ವವನ್ನು ಉಳಿಸಿಕೊಂಡು ಹೋಗಬೇಕು ಯಾವ ಸಕಾರಣವೂ ಇಲ್ಲದೇ ಎರಡು ದಿವಸ ಮೊದಲೇ ಕರೆದಿದ್ದೀರಿ ನಾವು ಅಜೆಂಡಾ ನೋಡಿದಾಗ, ಅದರಲ್ಲಿ ಏನೂ ಇಲ್ಲ, ಬಿಲ್ಸ್ ಇದ್ದಾವೆ ಎಂದರೆ ಇದು ಪರೋಕ್ಷವಾಗಿ ತಮ್ಮ ಮೇಲೆ ಒಂದು ರೀತಿಯಾದ ಪರಿಣಾಮ ಆಗುತ್ತದೆ ನಾನು ಕೆಟ್ಟ ಭಾಷೆ ಬಳಸುವುದಕ್ಕೆ ಇಷ್ಟಪಡುವುದಿಲ್ಲ ಆ ಸ್ಥಾನ ಬಹಳ ಪವಿತ್ರವಾದುದು ನಿಮ್ಮ ನಮ್ಮ ಸಂಬಂಧ ಕೂಡ ಚೆನ್ನಾಗಿ ಇರಬೇಕು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು, ತಿಳಿದುಕೊಳ್ಳಬೇಕು ಒಂದು ವೇಳೆ ಸರ್ಕಾರ ಕಾರಣ ಆಗಿದ್ದರೆ, ಆ ಕಾರಣ ಈಗಾಗಲೇ ನಮ್ಮ ಅಜೆಂಡಾದಲ್ಲಿ ನಮಗೆ ಗೊತ್ತಾಗಬೇಕಾಗಿತ್ತು ಯಾವ ಕಾರಣಕ್ಕಾಗಿ pre–pone ಮಾಡಿದರು ಎಂದು ಹೇಳಿ ಗೊತ್ತಾಗಬೇಕಿತ್ತು ಯಾವ ಕಾರಣವೂ ಅಜೆಂಡಾದಲ್ಲಿ ಗೋಚರ ಆಗದೇ ಇದ್ದು, ಈ ತರಹ ಮಾಡಿದರೆ ನಮಗೆ ಗೌರವ ತರತಕ್ಕ ವಿಷಯ ಅಲ್ಲ ಎಂದು ಅಷ್ಟೇ ಖೇದದಿಂದ ಹೇಳುತ್ತಿದ್ದೇನೆ

ಅಧ್ಯಕ್ಷರು –ಈಗ ನಮ್ಮ ಮಾನ್ಯ ಸಂಸದೀಯ ಸಚಿವರು ನನಗೆ ಕಳೆದ ಶುಕ್ರವಾರ ತಿಳಿಸಿದ್ದಾರೆ, ಪತ್ರವನ್ನು ಬರೆದಿದ್ದಾರೆ ಅದನ್ನು ನೋಡಿಯೇ ನಾನು ಸದನವನ್ನು ಕರೆದಿದ್ದೇನೆ ಅದಕ್ಕೆ ಅವರು ಉತ್ತರ ಹೇಳುತ್ತಾರೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಇನ್ನೂ ಮುಗಿಸಿಲ್ಲ ನಾನು ಮಾತನಾಡಬೇಕಾದರೆ ಎರಡು ನಿಮಿಷ ಅವರು ಮಾತನಾಡುತ್ತೇವೆಂದರು

ಶ್ರೀ ಎಂ ಪಿ ಪ್ರಕಾಶ್ – ಈಗಲೇ ಮಾನ್ಯ ರಮೇಶ್ ಕುಮಾರ್ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ನಾವು ಏನೂ ಮಾತನಾಡಬಾರದಾ?

ಅಧ್ಯಕ್ಷರು – ನೀವು ಏನು ಕೇಳುತ್ತಿದ್ದೀರಿ, ಆ ವಿಚಾರವನ್ನೇ ಹೇಳುತ್ತಾರೆ ಸರ್ಕಾರದ ವತಿಯಿಂದ ಹೇಳುತ್ತಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ನಿಮಗೆ ಇಷ್ಟ ಬಂದ ಹಾಗೆ ಮಾಡಿಕೊಳ್ಳಿ, ಹಾಗಾದರೆ

ಅಧ್ಯಕ್ಷರು – ಇಷ್ಟ ಬಂದ ಹಾಗೆ ಮಾಡುತ್ತಾ ಇಲ್ಲ, ನೀವೇನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ಅವರು ಉತ್ತರವನ್ನು ಸರ್ಕಾರದ ಪರವಾಗಿ ಹೇಳುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ನಾವು ಏನು ಮಾತನಾಡುತ್ತಿದ್ದೇವೆಂದು ಮೊದಲು ತಾವು ಕೇಳಿ ಸಾರ್

ಶ್ರೀ ಎಂ ಪಿ ಪ್ರಕಾಶ್ – ಈಗ ಅದನ್ನು ಈಗಾಗಲೇ ಮೊದಲು ಮಾತನಾಡಿದ್ದಾರೆ ಈಗ ಈ ವಿಚಾರದಲ್ಲಿ ಅಥವಾ ಯಾವುದೇ ವಿಚಾರದಲ್ಲಿ ಸರ್ಕಾರ ಉತ್ತರ ಕೊಡಲು ಅವಕಾಶ ಕೊಟ್ಟರೆ

ಅಧ್ಯಕ್ಷರು – ಈಗ ಈ ವಿಚಾರಗಳನ್ನು ಅವರೂ ಪ್ರಸ್ತಾಪ ಮಾಡುತ್ತಾರಂತೆ ಅವರು ಪ್ರಸ್ತಾಪ ಮಾಡಲಿ

ಶ್ರೀ ಎಂ ಪಿ ಪ್ರಕಾಶ್ – ಅವರಿಗೂ ಮಾತನಾಡಲು ಅವಕಾಶ ಕೊಡುತ್ತೀರಾ? ಮಾತನಾಡಲಿ

ಶ್ರೀ ಜೆ ಸಿ ಮಾಧುಸ್ವಾಮಿ – ಈ ಸಭೆ sine–die ಆಗಿ adjourn ಆದ ಸಭೆನಾ, ಈ ಸಭೆ ಮುಂದುವರಿದ ಸಭೆನಾ ಎಂದು ಮೊದಲು ತೀರ್ಮಾನ ಹೇಳಬೇಕು ಏಕೆಂದರೆ ತಾವು ಆ ಘನತೆವೆತ್ತ ಪೀಠದಲ್ಲಿ ಕುಳಿತುಕೊಂಡು 16ನೇ ತಾರೀಖಿಗೆ ಈ ಸಭೆಯನ್ನು ಮುಂದೂಡಿದ್ದೇನೆ ಎಂದು ಹೇಳಿ ಹೋಗಿದ್ದೀರಿ ಬೇರೆ ಎಲ್ಲಾ practical purposeಗೆ ಈ ಅಸೆಂಬ್ಲಿ ನಡೆಯುತ್ತಲೇ ಇದೆ ನೀವು sine–die adjourn ಮಾಡಲಿಲ್ಲ ಆಗ ಅಸೆಂಬ್ಲಿ ನಡೆಯುತ್ತಲೇ ಇತ್ತು, ತಾವು ಮತ್ತೊಂದು ನೋಟೀಸ್ ಕೊಟ್ಟು, ಆ ನೋಟೀಸ್‌ನಲ್ಲಿ 16 ನೇ ತಾರೀಖಿನಿಂದ business ಅನ್ನು ಫಿಕ್ಸ್ ಮಾಡಿದಿರಿ ಹಿಂದುಗಡೆ ಬುಲೆಟಿನ್ ಇದೆ 16ನೇ ತಾರೀಖು ಆದ ಮೇಲೆ ಏನೇನಾಗಬೇಕು ಎಂದು ಬುಲೆಟಿನ್ ಇದೆ ತಾವು ಇಷ್ಟು ಮಾಡಿದ ಮೇಲೆ, ಸಭಾ ನಾಯಕರು ಒಂದು ಕಡೆ ಭಾಷಣ ಮಾಡಿದರು ಸಭಾ ನಾಯಕರು 12ನೇ ತಾರೀಖು ಅಸೆಂಬ್ಲಿ ಕರೆಯುತ್ತೇವೆಂದು ಭಾಷಣ ಮಾಡಿದರು ನಮ್ಮ ಪಾರ್ಲಿಮೆಂಟರಿ ಸಚಿವರು ನಾವು 14ನೇ ತಾರೀಖು ಅಸೆಂಬ್ಲಿ ಕರೆಯುತ್ತಿದ್ದೇವೆಂದು ಹೊರಗಡೆ ಹೇಳಿದರು ತಾವು ನಮಗೆ 16ನೇ ತಾರೀಖು ಎಂದು ಹೇಳಿದಿರಿ ನಾವೆಲ್ಲ 16ನೇ ತಾರೀಖು ಎಂದು ಯೋಚನೆ ಮಾಡುತ್ತಿದ್ದೇವು ತಮ್ಮ ಆಫೀಸಿನಿಂದಲೂ 16ನೇ ತಾರೀಖು ಎಂದು ನೋಟೀಸ್ ಸರ್ವ್ ಆಗಿ ಬಿಟ್ಟಿತು ಅದರಲ್ಲಿ ಎಲ್ಲಾ ಬಂದು ಬಿಟ್ಟಿತು

16ನೇ ತಾರೀಖು ಏನು? 19,20ನೇ ತಾರೀಖು ಏನು ಎಂದು ಹೇಳಿ 5ನೇ ಏಪ್ರಿಲ್ ವರೆಗೂ ತಾವು ಬಿಸಿನೆಸ್ ಅನ್ನು ಫಿಕ್ಸ್ ಮಾಡಿ ಬಿಟ್ಟಿದ್ದೀರಿ ತಾವು ಒಂದು ಸಲ ಬಿಸಿನೆಸ್ ಅನ್ನು ಫಿಕ್ಸ್ ಮಾಡಿದ ಮೇಲೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಅನ್ನು ಕರೆಯಲಿಲ್ಲ ನಾವು ನಿಮಗೆ ಬೆಳಗಾವಿಯಲ್ಲೂ ಹೇಳಿದೆವು ಈ ಸಭೆಯನ್ನು ನಡೆಸುವ ಸಾರ್ವಭೌಮ ಅಧಿಕಾರ ತಮಗೇ ಇರುವುದು ಸರ್ಕಾರದ ಜೊತೆಗೆ ತಾವು ಚರ್ಚೆ ಮಾಡಿ ಸಭೆಯ ಸಮನ್ ಮಾಡಬೇಕೆಂದು ಹೇಳಿದೆವು ನಿಮ್ಮ ಗಮನಕ್ಕೆ ಬರದೇ ಈ ಶಾಸನ ಸಭೆ 12ನೇ ತಾರೀಖು ಅಥವಾ 14ನೇ ತಾರೀಖು ನಡೆಯುತ್ತದೆಂದು ಹೇಳಿ ಇಡೀ ಕರ್ನಾಟಕ ರಾಜ್ಯದ ಜನತೆಗೆ ಗೊತ್ತಿತ್ತು That is the privilege of the House ತಾವು ಅನೌನ್ಸ್ ಮಾಡಿದ ಮೇಲೆ ಈ ಶಾಸನ ಸಭೆ 16 ಅಥವಾ 12ಕ್ಕೆ ಸಮನ್ ಆಗುತ್ತದೆ ಎಂದು ಹೇಳಿ ಇಡೀ ರಾಜ್ಯದ ಜನ ಮಾತನಾಡುವ ಪರಿಸ್ಥಿತಿ ನಿರ್ಮಾಣ ಆಗಿತ್ತು ತಾವು ನೋಟೀಸ್ ಕೊಟ್ಟಿರಲಿಲ್ಲ ತಾವು ಸೈನ್ ಹಾಕಿದ್ದು ಶುಕ್ರವಾರದ ದಿವಸ ತಾವು ಪೇಪರ್‌ಗಳನ್ನು ತರಿಸಿಕೊಳ್ಳಿ ತಾವು ಅಧ್ಯಕ್ಷರಾಗಿ ಈ ಸಭೆಯ ಗೌರವವನ್ನು ಕಾಪಾಡಬೇಕು ಎಂದರೆ ತಾವು ತರಿಸಿಕೊಳ್ಳಿ ನಮಗೆ ಇದು ಅವಮಾನವಲ್ಲ ನಿಮ್ಮ ಪೀರಕ್ಕೆ ಅವಮಾನ ಎಂದು ನಮ್ಮ ಭಾವನೆ ಇನ್ನೂ ಎರಡು ದಿವಸ ಮೊದಲೇ ಕರೆಯಿರಿ ಬರುತ್ತೇವೆ ಎಂದು ನಾನೇ ಬಿಸಿನೆಸ್ ಅಡ್ವೈಸರಿ ಕಮಿಟಿಯ ಮುಂದೆ ಹೇಳಿದ್ದೆ That is the office which has to be respected. ಇವತ್ತು ಆ ಸೀಟಿಗೆ ಏನು ಗೌರವ ಈ ರಾಜ್ಯದಲ್ಲಿ ಉಳಿದಿದೆ ಎನ್ನುವ ನೋವು ನಮಗೆ ಸಾರ್ ನಿಮ್ಮ ಗೌರವ ಉಳಿಸಲಿಕ್ಕೆ ನಾವು ಎದ್ದು ನಿಂತುಕೊಂಡು ಮಾತನಾಡುತ್ತಿರುವುದು ನಮಗೆ ಚಿಂತೆ ಇಲ್ಲ ನಮಗೆ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಇನ್ನೂ 15 ದಿವಸ ನಡೆಸಿಕೊಂಡು ಹೋಗಲಿ ಎಂದು ಇದೆ ನಮಗೆ ಅಸೆಂಬ್ಲಿ ನಡೆಯುವುದು ಬೇಕು, ನಾವು ಬೇಡಿಕೊಳ್ಳುತ್ತಿದ್ದೇವೆ 100 ದಿವಸ ನಡೆಸಿ, 90 ದಿವಸ ನಡೆಸಿ ಎಂದು ಬೇಡಿಕೊಳ್ಳುತ್ತಿದ್ದೇವೆ ಶಾಸನ ಸಭೆ ಮೊಟಕು ಮಾಡಿ ಎಂದು ನಮ್ಮ ವಾದವಲ್ಲ ನಿಮ್ಮ ಕಛೇರಿಯಿಂದ ನೋಟೀಸ್ ಕೊಟ್ಟ ಮೇಲೆ, ಅಕಸ್ಮಾತ್ ನಿಮಗೆ ಜರೂರಾಗಿ ಅಸೆಂಬ್ಲಿ ಕರೆಯಲೇ ಬೇಕು ಎನ್ನುವ ಪರಿಸ್ಥಿತಿ ಏನು ಇತ್ತು ಎಂದು ಈ ಸಭೆಗೆ ತಾವು explain ಮಾಡುವ ಜವಾಬ್ದಾರಿ ತಮಗೆ ಇದೆ, ಸರ್ಕಾರಕ್ಕೆ ಇಲ್ಲ because, you have already served a notice to us 16ಕ್ಕೆ ನಮ್ಮನ್ನು ಇಲ್ಲಿಗೆ

ಸಮನ್ ಮಾಡಿದ್ದೀರಿ ರೂಲ್ಸ್ ಪ್ರಕಾರ ಸಮನ್ ಮಾಡಿದ್ದೀರಿ ನಾನು ರೂಲ್ಸ್ ಪೇಜ್ ನಂಬರ್ 9 ಅನ್ನು ನೋಡಿಕೊಂಡೇ ಇಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ ಹಿಂದಾಗಬಹುದು, ಮುಂದೆ ಕರೆಯಬಹುದು ಆ ಅಧಿಕಾರ 'ಅಧ್ಯಕ್ಷರಿಗೆ ಇದೆ ಏಕೆ ಇದೆ? ಏಕೆ ಇದೆ ಎಂತಲೂ ಯೋಚನೆ ಮಾಡಬೇಕಲ್ಲ ನಿಮಗೆ ಇಷ್ಟ ಬಂದ ಹಾಗೆ ಕರೆಯುವುದಕ್ಕೆ ಅಧಿಕಾರ ಇದೆಯಾ? ನೀವು ಯಾವಾಗ ಬೇಕಾದರೂ ಮಲಗಿಕೊಂಡಿದ್ದಾಗ, ಎದ್ದು ಕುಳಿತುಕೊಂಡು ಅಸೆಂಬ್ಲಿಗೆ ಬನ್ನಿ ಎಂದು ಕರೆಯುವ ಹಾಗೆ ಇದೆಯಾ? ನಮಗೇನು ಬೇರೆ ಕೆಲಸ ಕಾರ್ಯಗಳನ್ನು ಇಟ್ಟುಕೊಳ್ಳುವ ಸ್ಥಿತಿ ಇರುವುದಿಲ್ಲವಾ? ಮಾರ್ಚ್ ತಿಂಗಳಲ್ಲಿ ನೀವು 16ನೇ ತಾರೀಖು ಕರೆಯುತ್ತೀರಿ ಎಂದು ಹೇಳಿ ಅಷ್ಟರೊಳಗೆ ನಾವೇನು constituency ಕೆಲಸಗಳು ಮಾಡಬೇಕು ಎಂದು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದೇ ತಪ್ಪಾ? ಆಯಿತು ಸಾರ್ ಅದೆಲ್ಲವನ್ನೂ ರದ್ದು ಮಾಡಿ ಇಲ್ಲಿಗೆ ಬರುತ್ತೇವೆ ಅಂತಹ ಘನತೆವೆತ್ತ ಅಜೆಂಡಾವನ್ನು ತಾವೇನು ಇಲ್ಲಿ ಇಟ್ಟಿದ್ದೀರಿ? ಎಲ್ಲಾ ಕಾರ್ಯಕ್ರಮವನ್ನೂ 224 ಜನ ರದ್ದು ಮಾಡಿ ಎರಡು ದಿವಸ ಮೊದಲೇ ಕರೆಯುವಂತಹ ಅಜೆಂಡಾ, ವಿಶೇಷ ವಿಷಯ ತಮ್ಮ ನೋಟೀಸ್ ನಲ್ಲಿ ಏನು ಇದೆ? ತಾವು ನೋಟೀಸಿನಲ್ಲಿ ಏನು ಕೊಟ್ಟಿದ್ದೀರಿ? ಏನೂ ಕೊಟ್ಟಿರಲಿಲ್ಲ 16ನೇ ತಾರೀಖಿಗಿಂತಲೂ ಮುಂದಕ್ಕೆ ಇದ್ದಂಥ ಒಂದು bulletin ಅನ್ನು 14ನೇ ತಾರೀಖಿನಿಂದ print ಮಾಡಿಕೊಟ್ಟಿದ್ದೀರಿ ನನಗೆ ಇವೊತ್ತು question ಹಾಕುವುದಕ್ಕೆ ಕೊಡಬೇಕಾಗಿತ್ತು, Calling Attention ಹಾಕುವುದಕ್ಕೆ ಕೊಡಬೇಕಾಗಿತ್ತು ನೀವು bills ತರುತ್ತಿದ್ದೀರಿ ಎಂದರೆ, it is a official business day ನನಗೇಕೆ ಆ ಹಕ್ಕನ್ನು ತಾವು ಮೊಟಕುಗೊಳಿಸಿದಿರಿ? 'ಇವತ್ತೇ ನೀವು questions raise ಮಾಡಿ' ಎಂದು ಮೊದಲೇ ಹೇಳಬೇಕಾಗಿತ್ತು ಇಂತಹ ಒಂದು ಅಕ್ರಮವಾದ, ಕಾನೂನಿಗೆ ವಿರುದ್ಧವಾದ, ಸಂಪ್ರದಾಯಕ್ಕೆ ವಿರುದ್ಧವಾಗಿ ಶಾಸನಸಭೆಗಳನ್ನು ಕರೆಯುವುದು ತಮಗೆ ಗೌರವ ಬರುವುದಿಲ್ಲ ಇದರ ಮೇಲೆ ಆ ಸೀಟಿನ ಗೌರವ ಉಳಿಸುವುದು ಬಿಡುವುದನ್ನು ನಾನು ತಮಗೇ ಬಿಡುತ್ತೇನೆ ನಮಗೆ ಸರ್ಕಾರ ಕೊಡುವ ಉತ್ತರ ಬೇಕಾಗಿಲ್ಲ ಅವರಿಗೆ ಸ್ವಲ್ಪವಾದರೂ ಕಾಳಜಿ ಇರಬೇಕಾಗಿತ್ತು ಅವರು ಅಧ್ಯಕ್ಷರ ಮೇಲೆ ಸವಾರಿ ಮಾಡಬಾರದು ಇದು ಸಾರ್ವಭೌಮವಾಗಿರುವ ಸೀಟು ಅಥವಾ ಇರುವ ಅಧಿಕಾರವನ್ನು ನಿಮ್ಮಲ್ಲಿರುವ ಒಳ್ಳೆಯತನವನ್ನು

ಅಸಹಾಯಕತೆಯನ್ನು ಈ ರೀತಿ ದುರುಪಯೋಗಪಡಿಸಿಕೊಂಡು ಶಾಸನಸಭೆಗಳನ್ನು ಸರ್ಕಾರದ ಅಧೀನದಲ್ಲಿ ನಡೆಸುತ್ತೇವೆ ಎನ್ನುವುದಕ್ಕೆ ನಮ್ಮದು ತೀವ್ರ ವಿರೋಧವಿದೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಈಗ ತಮ್ಮ agenda ನಮ್ಮ ಕೈ ತಲುಪಿದೆ ಇದರಲ್ಲಿ ಯಾವುದು ಬಹಳ ಪ್ರಾಮುಖ್ಯ? ಈ ಎರಡು ದಿವಸ 14 ಮತ್ತು 15ನೇ ತಾರೀಖುಗಳಂದು ಕರೆದು, ಸಮಗ್ರವಾಗಿ ಚರ್ಚೆ ಮಾಡತಕ್ಕಂಥಾದ್ದು ಏನು? ಆಕಾಶ ಕಳಚಿ ಬಿದ್ದುಹೋಗುತ್ತಿತ್ತೇ? ಅಥವಾ ಏನಾದರೂ ಸುನಾಮಿ ಬಂದುಬಿಟ್ಟಿತ್ತೇ? ಅಥವಾ ಕರ್ನಾಟಕ ಸರ್ಕಾರವೇನಾದರೂ ಬೇರೆ ಕಡೆಗೆ ಹೊರಟು ಹೋಗಿತ್ತೇ? ಅಥವಾ ಕರ್ನಾಟಕವೇನಾದರೂ ಬೇರೆ ಕಡೆಗೆ ಹೊರಟು ಹೋಗಿತ್ತೇ? ಏನು ಪರಿಸ್ಥಿತಿ? ಬಹಳ ಪ್ರಾಮುಖ್ಯವಾದ ಮಸೂದೆ ಬಗ್ಗೆ ಚರ್ಚೆ ಮಾಡದಿದ್ದರೆ, ರಾಜ್ಯಕ್ಕೆ ಬಹಳ ಅತ್ಯಂತ ಘೋರವಾದ ಅನ್ಯಾಯವಾಗುತ್ತದೆಂದೂ, ಅಪರಾಧವಾಗುತ್ತದೆ ಎಂದರೆ ಅದೂ ಇಲ್ಲ ಮೊದಲನೆಯದಾಗಿ, ಈ ಸದನ ತಮಗೆ ಸೇರಿದ್ದು, ಇದರ ಸಾರ್ವಭೌಮತ್ವ ತಮಗೆ ಸೇರಿದ್ದು, ಇದು ಸರ್ಕಾರದ್ದಲ್ಲ ಈ ಸದನ ಮಾನ್ಯ ಯಡಿಯೂರಪ್ಪನವರದಲ್ಲ, ಮಾನ್ಯ ಕುಮಾರಸ್ವಾಮಿಯವರ ಸರ್ಕಾರದ್ದೂ ಅಲ್ಲ ಇದು ಎಲ್ಲಾ ಶಾಸಕರಿಗೂ ಸೇರಿದ ಸದನವಾಗಿದೆ ಇಲ್ಲಿ 16ನೇ ತಾರೀಖು ಎಂದು ತಾವು ಸ್ಪಷ್ಟವಾಗಿ ಹೇಳಿದ್ದೀರಿ ಆದರೆ, ಹೊರಗಡೆ ಅನೇಕ ಕಡೆಗಳಲ್ಲಿ ವಿಚಾರಗಳು ಏನು ಬರುತ್ತಿವೆ ಎಂದರೆ, ಒಬ್ಬೊಬ್ಬ ಮಂತ್ರಿಗಳು ಒಂದೊಂದು ಕಡೆ ಹೇಳುತ್ತಿದ್ದಾರೆ 12ನೇ ತಾರೀಖು ಎಂದು ಒಬ್ಬರು ಹೇಳುತ್ತಾರೆ, 14ನೇ ತಾರೀಖು ಎಂದು ಮತ್ತೊಬ್ಬರು ಹೇಳುತ್ತಾರೆ ಇದೇನು ಇಷ್ಟೊಂದು ಬೇಜವಾಬ್ದಾರಿ? ಮಂತ್ರಿಗಳು ಈ ಸದನವನ್ನು ನಡೆಸತಕ್ಕಂಥ, ದಿನಾಂಕವನ್ನು ಪ್ರಕಟಿಸತಕ್ಕಂಥ ತೀರ್ಮಾನ ಕೈಗೊಳ್ಳುವುದಾದರೆ, ಆ ಪೀಠಕ್ಕೆ ಅಗೌರವವಾದಂತಾಗುತ್ತದೆ ನಾವು ತಮ್ಮ ಪೀಠಕ್ಕೆ ಬಹಳ ಗೌರವ ಕೊಡುತ್ತಿದ್ದೇವೆ ನೀವು ರಾಜೀನಾಮೆ ಕೊಡಬೇಕೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ಆ ಮಟ್ಟಕ್ಕೆ ಹೋದರೂ ಅದಕ್ಕೊಂದು ಘನತೆ ಬರುತ್ತದೆಂದು ಹೇಳುತ್ತೇನೆ ಇವತ್ತು ಇವರು ಸದನವನ್ನು 14 ಮತ್ತು 15ನೇ ತಾರೀಖುಗಳಂದು ಕರೆದಿರುವ ವಿಚಾರ ಇದೆಯಲ್ಲ, ನಿಮ್ಮ ಬಗ್ಗೆ ನಾವು ಪ್ರಾಮಾಣಿಕವಾಗಿ ಗೌರವ ಇಟ್ಟುಕೊಂಡಿದ್ದೇವೆ ನೀವು ರಾಜೀನಾಮೆ ಕೊಡಬೇಕೆಂದು ಒತ್ತಾಯಮಾಡುವುದಿಲ್ಲ ಆ ಮಟ್ಟಕ್ಕೆ ತಾವು ಹೋದರೆ,

ಒಂದು ಇತಿಹಾಸ ನಿರ್ಮಾಣವಾಗುತ್ತದೆ ಇದೇನು ಹುಡುಗಾಟವೇ? ಸರ್ಕಾರವೇ ಇದು? ಹುಡುಗರ ದರ್ಬಾರು ಆಗಿದೆ ಅತ್ಯಂತ ಅಪಾಯಕಾರಿ ಬೆಳವಣಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನವನ್ನು ಈ ರೀತಿ ಕಾಲ್‌ಕಸಕ್ಕಿಂತಲೂ ಕಡಿಮೆಯಾಗಿ ಕಾಣುತ್ತಿರುವುದು ಒಳ್ಳೆಯದಲ್ಲ ನಾವು ಮಾನ್ಯ ಪ್ರಕಾಶ್ ಅವರಿಗಿಂತಲೂ ಹೆಚ್ಚಾಗಿ ತಮ್ಮನ್ನು ನೇರವಾಗಿ ಕೇಳುತ್ತೇವೆ ನೀವು ಆ ಒಂದು ಮಾತನ್ನು ನಮಗೆ ಹೇಳಿಬಿಡಿ "ಇದಕ್ಕೋಸ್ಕರ ಸದನ ಕರೆದಿದ್ದೇವೆ, ನನ್ನ ಆಜ್ಞೆ ಪ್ರಕಾರ ಕರೆದಿದ್ದಾರೆ, ಕರೆಯುವುದಕ್ಕೆ ನಾನೇ ಸೂಚನೆ ಕೊಟ್ಟಿದ್ದೆ" ಎನ್ನುವುದನ್ನು ನೀವು ಹೇಳಿ ಅದು ಬೇರೆ ವಿಚಾರ ನಿಮಗೆ ಗೊತ್ತಿಲ್ಲ, ಖಂಡಿತವಾಗಿಯೂ ಗೊತ್ತಿಲ್ಲ ಈ ಸದನ ಕರೆಯುವುದು ನಿಮಗೆ ಗೊತ್ತಿಲ್ಲ ಇದೆಲ್ಲವೂ ಸರ್ಕಾರದ ತೀರ್ಮಾನ ಈ ಸಭೆ ಸೇರುವುದು ನಿಮಗೆ ಗೊತ್ತಿಲ್ಲ, ನಿಮ್ಮ ಕಾರ್ಯಾಲಯಕ್ಕೆ ಗೊತ್ತಿಲ್ಲ ಕೊನೆಯ ಗಳಿಗೆಯಲ್ಲಿ ಕರೆದರು ವಿದೇಶದಲ್ಲಿ ನೀವು, ಉಪಾಧ್ಯಕ್ಷರು ಹೋಗಿದ್ದು, ಇಲ್ಲಿ ಯಾರೂ ಇಲ್ಲದಿದ್ದರೆ ಗತಿಯೇನು? ಅಮೆರಿಕಾ ಅಥವಾ ಲಂಡನ್‌ಗೆ ಹೊರಟು ಹೋಗಿದ್ದೀರೆಂದು ಇಟ್ಟುಕೊಳ್ಳಿ, ಇಲ್ಲಿ ಸದನ ಕರೆಯುವವರು ಯಾರು? ಪರಿಸ್ಥಿತಿ ಏನು? ಇದು ಸರಿಯಲ್ಲ ನಿಜವಾಗಿಯೂ ಹೇಳುತ್ತೇನೆ ನಿಮ್ಮ ಹೃದಯ ಮುಟ್ಟಿ ನೀವು ಹೇಳಬೇಕು ನಿಮಗೆ ಗೊತ್ತಿಲ್ಲವೆಂದು ಹೇಳುತ್ತಿದ್ದೇನೆ ನನಗೆ ಗೊತ್ತಿದೆ ನಿಮಗೆ ಸ್ಪಷ್ಟವಾಗಿ ಗೊತ್ತಿಲ್ಲ ನಿಮ್ಮನ್ನು ನೇರವಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ, ಸದನವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಆದುದರಿಂದ, ದಯವಿಟ್ಟು ತಾವು ಇದಕ್ಕೆ ಉತ್ತರ ಕೊಡಲೇಬೇಕು ನಿಮ್ಮಿಂದ ನಾವು ಉತ್ತರ ಬಯಸುತ್ತೇವೆ ತಾಂತ್ರಿಕವಾಗಿ ಮಾಡಬಹುದೆಂದು ಮಾನ್ಯ ಪ್ರಕಾಶ್‌ರವರು ಹೇಳುವುದು, ಬಿಡುವುದು, ಅದು ಬೇರೆ ವಿಚಾರ ನೀವು ನೇರವಾಗಿ ಏನು ಹೇಳುತ್ತೀರೋ ಅದನ್ನು ಈ ಸದನಕ್ಕೆ ಹೇಳಿ ಈ ಸದನದ ಒಡೆಯರು ನೀವು, ಈ ಸದನದ ಅಧ್ಯಕ್ಷರು ನೀವು, ಸಾರ್ವಭೌಮತ್ವ ಇರತಕ್ಕಂಥವರು ನೀವು ಅದಕ್ಕೋಸ್ಕರ, ನಿಮ್ಮನ್ನು ಆ ಪೀಠದಲ್ಲಿ ಮೇಲೆ ಕುಳ್ಳಿರಿಸಿರುವುದು ಆದುದರಿಂದ, ದಯವಿಟ್ಟು ಈ ಸದನಕ್ಕೆ ತಾವು ಹೇಳಬೇಕು

ಶ್ರೀ ಪಿ ಜಿ ಆರ್ ಸಿಂಧ್ಯ (ಕನಕಪುರ) ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ ನೀವು ಈ ವಿಧಾನಸಭೆ ಅಧಿವೇಶನವನ್ನು ಕರೆಯತಕ್ಕಂಥ ಕರ್ತವ್ಯವನ್ನು ಪಾಲಿಸಿದ್ದೀರಿ ನಾವು ಇದೇ ಸದನದಲ್ಲಿ ಒಂದು ಕಾನೂನು

ಮಾಡಿಕೊಂಡಿದ್ದೇವೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಈ ವಿಧಾನಸಭೆಯ ಅಧಿವೇಶನದ ಅವಧಿಯನ್ನು ಇಷ್ಟು ದಿವಸ ನಿರ್ದಿಷ್ಟವಾಗಿ ನಡೆಸಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ ರಾಜ್ಯದ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ವಿಶೇಷವಾಗಿ 100 ದಿವಸಗಳೆಂದು ಇತ್ತು 60 ದಿವಸಗಳಾದರೂ ಚರ್ಚೆ ಮಾಡಬೇಕೆಂದು ಕಾನೂನು ಮಾಡಿದ್ದೇವೆ . ಆ ದೃಷ್ಟಿಯಿಂದ ಅದನ್ನು fulfil ಮಾಡವುದಕ್ಕೆಂದು ಹೇಳುವುದು, ಕರೆಯುವುದು ಒಂದು ಭಾಗ ಆದರೆ, ನಮಗೆ ಇಲ್ಲಿ ನೋವಾಗತಕ್ಕಂಥ ವಿಚಾರ ಏನೆಂದರೆ, ತಾವು ಏನೇ ಮಾಡಬೇಕಾದರೂ ಸಹ ಸರ್ಕಾರದಿಂದ ತಾವು guidelines ತೆಗೆದುಕೊಳ್ಳಬೇಕಾಗುತ್ತದೆ, ಸರ್ಕಾರದ ಅಭಿಪ್ರಾಯ ತೆಗೆದುಕೊಳ್ಳಬೇಕಾಗುತ್ತದೆ ಸರ್ಕಾರದ ಅಭಿಪ್ರಾಯ ತೆಗೆದುಕೊಳ್ಳುವಾಗ, ವಿರೋಧ ಪಕ್ಷದವರನ್ನೂ ಸಹ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಬಹಳ ಪ್ರಮುಖವಾಗಿರತಕ್ಕಂಥದ್ದು ಈ ವಿಧಾನ ಸಭೆ ಅಧಿವೇಶನದಲ್ಲಿ ಅನೇಕ ಕೆಟ್ಟ ಸಂಪ್ರದಾಯಗಳನ್ನು ನಮ್ಮ ಮುಂದಿನ ಪೀಳಿಗೆಗೆ ನಾವು ಹಾಕಿಕೊಡುತ್ತಿದ್ದೇವೆ. ಅಧ್ಯಕ್ಷರ ಬಗ್ಗೆ ಅವಿಶ್ವಾಸದ ನಿರ್ಣಯ ಇಲ್ಲಿ ಮಂಡನೆಯಾಗಿದೆ ನನ್ನ ಅಭಿಪ್ರಾಯದಲ್ಲಿ ಈಗ ಆ ಸ್ಥಾನದಲ್ಲಿ ಯಾರು ಕುಳಿತಿದ್ದಾರೆ ಎಂಬುದು ಪ್ರಾಮುಖ್ಯವಲ್ಲ ಆ ಸ್ಥಾನ ಬಹಳ ಪ್ರಾಮುಖ್ಯವಾಗಿರತಕ್ಕಂಥದ್ದು ನಾವೆಲ್ಲರೂ ಒಂದೊಂದು ರಾಜಕೀಯ ಪಕ್ಷವನ್ನು ಅಥವಾ ರಾಜಕೀಯ ರೀತಿ–ನೀತಿಗಳನ್ನು ಇಲ್ಲಿ ಪ್ರತಿಬಿಂಬಿಸುತ್ತೇವೆ ನಮ್ಮ ಅಭಿಪ್ರಾಯಗಳನ್ನಾದರೂ ತೆಗೆದುಕೊಂಡು ಇದನ್ನು ಮಂಡಿಸಬೇಕೇ, ಬಿಡಬೇಕೇ, ಎಂಬುದನ್ನಾದರೂ ತಾವು ಹೇಳಬೇಕಾಗಿತ್ತು ತಾವು ಅದೇನು ಕೋಪದಲ್ಲಿ ಮಾಡಿದಿರೋ, ಆವೇಶದಲ್ಲಿ ಮಾಡಿದಿರೋ, ಅದು agendaದಲ್ಲಿ ಬಂತು ಏಕೆ ಇದು ಬರುತ್ತಿದೆ? ನಮ್ಮ ಅಧ್ಯಕ್ಷರು ಹೀಗೇಕೆ ಮಾಡುತ್ತಿದ್ದಾರೆಂದು ನನಗೆ ಆಶ್ಚರ್ಯವಾಯಿತು ಅಧ್ಯಕ್ಷರೆ, ಜನರು ಹೊರಗಡೆ ನಮ್ಮ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಹಿಂದೆ ಕುಳಿತಿರತಕ್ಕಂಥ ಸದಸ್ಯರು ಯಾರೂ ಸಹ ಮಾತನಾಡುವುದಕ್ಕಾಗುವುದಿಲ್ಲ ನನ್ನಂಥ 4–5–6 ಸಲ ಗೆದ್ದು ಬಂದಿರುವವರು, ಈ ಅಧಿವೇಶನ ನಮ್ಮ ಸ್ವತ್ತು ಎಂದು ನಾವು ನಡೆದುಕೊಳ್ಳಬಾರದು ನಾವು ಒಳ್ಳೆಯ ಸಂಪ್ರದಾಯಗಳನ್ನು ಹಾಕಬೇಕಾಗುತ್ತದೆ ತಾವು ದಯವಿಟ್ಟು ಆ ಸಂಪ್ರದಾಯಗಳನ್ನು ಎತ್ತಿ ಹಿಡಿಯುವಂಥ ಕೆಲಸ ಮಾಡಬೇಕು ಈಗ ಸರ್ಕಾರ ನಿಮ್ಮನ್ನು they have

taken it for granted. ಮಾನ್ಯ ಅಧ್ಯಕ್ಷರೆ, ನಿಮ್ಮನ್ನು grantಗೆ ತೆಗೆದುಕೊಂಡುಬಿಟ್ಟಿದ್ದಾರೆ You must assert your position. 16ನೇ ತಾರೀಖು ಬಜೆಟ್ ಮಂಡನೆ ಇತ್ತು ನನಗೂ ಸಹ ಇವತ್ತು ಅಧಿವೇಶನ ಇದೆ ಎಂದು ಗೊತ್ತಾಗಿದ್ದು, 2 ದಿನಗಳ ಹಿಂದೆ ದೂರವಾಣಿ ಮೂಲಕ ನಮ್ಮ ಹಿರಿಯ ನಾಯಕರನ್ನು ಸಮಾಲೋಚನೆ ಮಾಡಿದಾಗ 'ಈ ತರಹ ನಾವು ಅಧಿವೇಶನ ಕರೆಯಬೇಕೆಂದಿದ್ದೇವೆ' ಎಂಬ ಮಾತನ್ನು ಅವರು ಸೌಜನ್ಯದಿಂದ ಹೇಳುತ್ತಾರೆ ಆದರೆ, ಇದರ ಪರಮಾಧಿಕಾರ ನಿಮ್ಮದು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದಂಥ ಸಂದರ್ಭದಲ್ಲಿ ಅಧಿವೇಶನ ಕರೆಯುವುದಕ್ಕೆ ರಾಜ್ಯಪಾಲರನ್ನು ಮತ್ತು ನಿಮ್ಮನ್ನು Cabinet request ಮಾಡಿಕೊಳ್ಳಬೇಕು ನೀವು Business Advisory Committee Members ಅನ್ನು un-official ಆಗಿ consult ಮಾಡಿ, ಈ ರೀತಿ ಒಂದು ತುರ್ತು ಸಂಭವ ಇದೆ ಎಂದು ಹೇಳಬಹುದಾಗಿತ್ತು ನಮಗೆ ಈಗ ಗೊತ್ತಿದೆ ಕಾವೇರಿ ವಿಚಾರದಲ್ಲಿ ಚರ್ಚೆ ಮಾಡತಕ್ಕಂಥ ಅವಕಾಶ ನಮಗೆ ಇಲ್ಲ ನೋಡಿ, ಹೇಗೆ ಅವಕಾಶಗಳನ್ನು ಕಳೆದುಕೊಳ್ಳುತ್ತೇವೆ ಈಗ sub judice ಆಗುತ್ತದೆಂಬ ಮಾತನ್ನು ಹೇಳತಕ್ಕಂಥ ಜನರಿದ್ದಾರೆ 'ಇದರ ಬಗ್ಗೆ ನೀವು ಏನೂ ಚರ್ಚೆ ಮಾಡಬೇಡಿ' ಎಂದು ಹೇಳತಕ್ಕಂಥ ಪರಿಸ್ಥಿತಿ ಬಂದಿದೆ ಅವತ್ತು ವಿರೋಧ ಪಕ್ಷದವರಾದಿಯಾಗಿ ಎಲ್ಲಾ ಪಕ್ಷದವರೂ ಇದ್ದು ಸಭೆ ನಡೆಸಿದ ಸಂದರ್ಭದಲ್ಲಿ ಸರ್ವಾನುಮತದಿಂದ ನೀವು ಒಂದು ತೀರ್ಮಾನ ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದರು Assemblyಯಲ್ಲಿ ಇವರು resolution ಮಾಡಬೇಕಾಗಿತ್ತು ಅದು strong ಆಗುತ್ತಿತ್ತೆಂದು ಮಾದೇಗೌಡರಂಥ ಮುಖಂಡರೂ ಸಹ ಹೇಳಿದರು ಮಾನ್ಯ ವಾಟಾಳ್ ನಾಗರಾಜ್‌ರವರು ಅದಕ್ಕೋಸ್ಕರವೇ ಹೇಳಿದರು ಅದಕ್ಕೂ ಸಹ ಅವಕಾಶ ಸಿಗಲಿಲ್ಲ ಆದುದರಿಂದ, ನಾನು ಆರು ಸಾರಿ ಈ ಸದನಕ್ಕೆ ಗೆದ್ದು ಬಂದಿದ್ದೇನೆ ಅದರ ಅನುಭವದ ಆಧಾರದ ಮೇಲೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ ಅದನ್ನು ತಾವು ದಯವಿಟ್ಟು ಸ್ವೀಕರಿಸಬೇಕು ಈ ರೀತಿ ಯಾವುದೇ ತೀರ್ಮಾನಗಳನ್ನು ಮಾಡುವಾಗ ಒಂದು ಮುಖ್ಯವಾದ ವಿಷಯವನ್ನು ಗಮನಿಸಬೇಕು ಈಗ ಹಿಂದೆ ಇದ್ದಂತೆ ಒಂದು ಪಾರ್ಟಿ 180 ಸೀಟು, 140 ಸೀಟುಗೆಲ್ಲುವುದು ಈಗ ಕನಸಿನ ಮಾತು This is a coalition era. ಯಾರ ಕೈಯಲ್ಲೂ ತಪ್ಪಿಸುವುದಕ್ಕಾಗುವುದಿಲ್ಲ ಯಾವ

7/4

ಸಂದರ್ಭದಲ್ಲಿ ಯಾರು ಮುಖ್ಯಮಂತ್ರಿಗಳಾಗುತ್ತಾರೋ, ಯಾರು ಏನಾಗುತ್ತಾರೋ, ಏನೂ ಹೇಳುವುದಕ್ಕಾಗುವುದಿಲ್ಲ ಇಂತಹ ಸನ್ನಿವೇಶದಲ್ಲಿ 14ನೇ ತಾರೀಖಿನಂದು ಅಧಿವೇಶನ ಕರೆಯುತ್ತಿದ್ದೇವೆಂದು ವಿರೋಧ ಪಕ್ಷದ ನಾಯಕರನ್ನೂ ಸಹ ತಾವು ಈ ವಿಚಾರದಲ್ಲಿ consult ಮಾಡಿಲ್ಲ Floor leaders ಇದ್ದಾರೆ, ಅವರನ್ನು ಸಹ ನೀವು consult ಮಾಡಿಲ್ಲ ಮಾಡಿರತಕ್ಕಂಥದ್ದು 60 ದಿವಸ fulfil ಮಾಡುವುದಕ್ಕೆ ಜನರು ಬರಗಾಲದ ಬಗ್ಗೆ ಮಾತನಾಡಬೇಕೆಂದು ಹೇಳುತ್ತಾರೆ ನಮ್ಮ ಬಗ್ಗೆ ಎಷ್ಟೊಂದು ಟೀಕೆ ಇದೆಯೆಂಬುದನ್ನು ಇವತ್ತು ಪತ್ರಿಕೆಗಳಲ್ಲಿ ಹೇಳುತ್ತಿದ್ದಾರೆ ಶಾಸನ ಸಭೆ ಸದಸ್ಯರುಗಳು ಬರಗಾಲದ ಬಗ್ಗೆ ಮಾತನಾಡುತ್ತಿಲ್ಲ, ಕಾವೇರಿ ಬಗ್ಗೆ ಮಾತನಾಡಲಿಲ್ಲ, ಬೇಕಾದಷ್ಟು ಹಗರಣಗಳು ನಡೆದಿದ್ದರೂ, ಅದರ ಬಗ್ಗೆ ಮಾತನಾಡುತ್ತಿಲ್ಲ ಅಧಿಕಾರಿಗಳು ಮಂತ್ರಿಗಳ, ಶಾಸಕರ ಮಾತುಗಳನ್ನು ಕೇಳುವುದಿಲ್ಲ ಅವೆಲ್ಲವನ್ನೂ ಚರ್ಚೆ ಮಾಡಬೇಕೆಂದರೆ, ಅದಕ್ಕೆ ಇದು ಸರಿಯಾದ ಕ್ರಮವಲ್ಲ ತಾವು ಹಿರಿಯ ಸದಸ್ಯರಾಗಿದ್ದೀರಿ ಲೋಕಸಭಾ ಸದಸ್ಯರಾಗಿದ್ದವರು Cabinetನಲ್ಲಿ ಕೆಲಸ ಮಾಡಿರತಕ್ಕಂಥವರು, ಹಲವಾರು ವರ್ಷಗಳ ಕಾಲ ವಿಧಾನಸಭೆಯಲ್ಲಿ ಕೆಲಸ ಮಾಡಿದ್ದೀರಿ ತಮಗೆ ನನ್ನದೊಂದು ಸಲಹೆ ಏನೆಂದರೆ, ದಯವಿಟ್ಟು ವಿರೋಧ ಪಕ್ಷದವರನ್ನು, ಅವರು ಯಾರೇ ಆಗಲಿ, ನೀವು ಅವರನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಆ ರೀತಿ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮದ ಪಟ್ಟಿಯನ್ನು ತಾವು ತಯಾರಿಸಿದರೆ, ಬಹುಶ ಈ ಗೊಂದಲ ಉದ್ಭವವಾಗುವುದಿಲ್ಲ ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ತಮಗೆ ತುಂಬಾ ಧನ್ಯವಾದಗಳು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ಪತ್ರಿಕೆಯ ಮೂಲಕ ಸದನ ನಡೆಯುತ್ತಿದೆ ಎಂಬುದನ್ನು ಕೇಳಿ ಸದನಕ್ಕೆ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ ನಮಗೆ notification copy ಬಂದು ನಾವು ಇಲ್ಲಿಗೆ ಬಂದುದಲ್ಲ ಮಾನ್ಯ ಸಚಿವರ ಹೇಳಿಕೆ ಪತ್ರಿಕೆಯಲ್ಲಿ ಬಂದುದನ್ನು ನೋಡಿ ಈ ಸದನಕ್ಕೆ ಬಂದಿದ್ದೇವೆ ಇದು ದೊಡ್ಡ ದುರಂತವೆಂದು ಭಾವಿಸುತ್ತೇನೆ ಪ್ರಥಮವಾಗಿ 3–4 ಇಲ್ಲವೇ 4–5 ರಂದು ಕಾವೇರಿಯ ಬಗ್ಗೆ ಚರ್ಚೆಗೆ ಕರೆಯುತ್ತೇವೆಂದು ಪತ್ರಿಕೆಯ ಮೂಲಕ ಸುದ್ದಿ ಬಂತು ನಂತರ 12

ಆಯಿತು ಅನಂತರ 14 ಆಯಿತು ಆದರೆ, ಬೆಂಗಳೂರಿನಲ್ಲಿ ಇದ್ದವರಿಗೆ, ಬೆಂಗಳೂರಿಗೆ ಬಂದವರಿಗೆ 14ನೇ ತಾರೀಖು ಸದನ ಎಂಬ ಬಗ್ಗೆ notification copy ಸಿಕ್ಕಿದೆಯೇ ಹೊರತು ಮತ್ತಾರಿಗೂ ಅದರ ಬಗ್ಗೆ ಮಾಹಿತಿಯೇ ಇಲ್ಲ ನಾವು ಧನ್ಯವಾದವನ್ನು ಹೇಳಬೇಕಾದದ್ದು ಪತ್ರಕರ್ತರಿಗೆ ಪತ್ರಿಕೆಯಲ್ಲಿ ಬಂದಿದ್ದರಿಂದ ನಾವು ಸದನಕ್ಕೆ ಬಂದಿದ್ದೇವೆ ಬಜೆಟ್ 29 ಇಲ್ಲವೇ 30 ರಂದು pass ಆದಮೇಲೆ, ಇನ್ನೂ ಏನು 5 ದಿವಸ ಅಧಿವೇಶನ ಇದೆ, ಅದನ್ನೇನಾದರೂ ಮೊಟಕು ಮಾಡುವುದಕ್ಕೋಸ್ಕರ ಈ ಎರಡು ದಿವಸ ಮೊದಲು ಅಧಿವೇಶನ ಕರೆಸಿದ್ದಾರೋ ಎಂಬ ಅನುಮಾನ ಬರುತ್ತಿದೆ Last time agendaದಲ್ಲೇನು billಗಳು ಇತ್ತೋ ಅದೇ agenda ದಲ್ಲಿದೆ ಹೊಸದಾಗಿ ಮತ್ತೇನು ಬಂದಿಲ್ಲ ನಾವು ಕಾನೂನನ್ನು ಜಾಸ್ತಿಮಾಡಿ confusion create ಮಾಡುತ್ತಿದ್ದೇವೆಯೇ ಹೊರತು ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ನೋಡುತ್ತಿಲ್ಲ ನಾವೇ ಮಾಡಿಕೊಂಡ ಕಾನೂನು ನಮಗೇ ವಿರೋಧವಾಗುತ್ತಿದೆಯೇನೊ ಎಂಬ ಪರಿಸ್ಥಿತಿ ಸರ್ಕಾರಕ್ಕೆ ಬಂದಿದೆ ಆದ್ದರಿಂದ ಸರ್ಕಾರವಲ್ಲ, ತಾವು ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಸರ್ಕಾರದ ಉತ್ತರವನ್ನು ನಾವು ಕೇಳಲು ಇಲ್ಲ ಮುಂದಿನ ದಿನಗಳಲ್ಲಿ ಈ ರೀತಿ ಆಗಬಾರದು ಎಂದು ಕೇಳಲು ನಿಂತಿದ್ದೇವೆ ಧನ್ಯವಾದಗಳು

ಅಧ್ಯಕ್ಷರು ಸರ್ಕಾರದಿಂದ ಕಳೆದ ಶುಕ್ರವಾರ ನನಗೆ ವಿನಂತಿ ಬಂತು ಕೆಲವು ಪ್ರಮುಖವಾದ ವಿಚಾರಗಳು ಇದ್ದಾವೆ, ಚರ್ಚೆ ಮಾಡಬೇಕು, ಬಿಲ್ಲುಗಳು ಇದ್ದಾವೆ ಚರ್ಚೆ ಮಾಡಬೇಕು, ಆದ್ದರಿಂದ ಅಧಿವೇಶನವನ್ನು ಕರೆಯಬೇಕೆಂದು ಸರ್ಕಾರ ವಿನಂತಿ ಮಾಡಿದಾಗ ನಾನು ಅಡ್ಡಿ ಮಾಡಲು ಸಾಧ್ಯವಾಗುವುದಿಲ್ಲ ನಾನು ಲೋಕಸಭೆಯಲ್ಲಿ ನೋಡಿದ್ದೇನೆ ಅನೇಕ ಪ್ರಕರಣಗಳಲ್ಲಿ ಈ ರೀತಿಯಾಗಿ advance ಮಾಡಿಕೊಳ್ಳತಕ್ಕದ್ದು ಆಗಿದೆ ಅದನ್ನೆಲ್ಲ ನೋಡಿ ನಾನು ಈ ದಿವಸ ಅಧಿವೇಶನವನ್ನು ಕರೆದಿದ್ದೇನೆ ಎಲ್ಲರಿಗೂ phonogram ಕಳುಹಿಸಿದ್ದೇವೆ Bulletin ಇಸ್ಯೂ ಮಾಡಿದ್ದೇವೆ ಅದರ ಬಗ್ಗೆ ಸರ್ಕಾರದ ವತಿಯಿಂದ ಅವರು ಹೇಳುತ್ತಾರೆ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ತಮಗೆ ಸಹಾಯವಾಗಲಿಕ್ಕಾಗಿ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ನಾನು ಹೇಳಲು ಇಷ್ಟಪಡುತ್ತಿದ್ದೇನೆ ಈಗೇನು ಮಾನ್ಯ ವಿರೋಧ ಪಕ್ಷದ ನಾಯಕರುಗಳು

ಮತ್ತು ಅನೇಕ ಹಿರಿಯ ಸದಸ್ಯರುಗಳು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ, ಅದು ನಿಜವಾಗಿಯೂ ಒಂದು ಸತ್ಸಂಪ್ರದಾಯಕ್ಕೆ ಮತ್ತು ನಿಯಮಾವಳಿಗಳ ಸಂದರ್ಭದಲ್ಲಿ ಮಾಡಬೇಕಾಗಿರತಕ್ಕದ್ದು ಆದರೆ, ಎಲ್ಲಾ ಸಂದರ್ಭಗಳಲ್ಲೂ ಕೂಡ ವಿಶೇಷವಾದ ಸನ್ನಿವೇಶಗಳು ಸೃಷ್ಟಿಯಾಗುತ್ತದೆ ಆ ಸನ್ನಿವೇಶಗಳು ವಿಶೇಷವೋ ಅಲ್ಲವೋ ಅದು ಬೇರೆ ವಿಚಾರ ಆದರೆ, ನಮ್ಮ ನಿಯಮಾವಳಿಗಳಲ್ಲಿ ಇಂಥ ವಿಚಾರಗಳು ಪ್ರಸ್ತಾಪಿಸಲ್ಪಡುತ್ತವೆ ಎನ್ನುವಂಥ ಕಾರಣಕ್ಕಾಗಿಯೇ ನಿಯಮಾವಳಿ 15ರ ಕೆಳಗೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಅದರ ಬಗ್ಗೆ ನಾವು ಪ್ರಶ್ನೆ ಮಾಡುತ್ತಿಲ್ಲ

ಶ್ರೀ ಎಂ ಪಿ ಪ್ರಕಾಶ್ ಒಂದು ಸಲ ನಾನು ಹೇಳಿಬಿಡುತ್ತೇನೆ ಅದರ ಮೇಲೆ ಎಲ್ಲಾ ಏನಾದರೂ ತಿಳಿದುಕೊಳ್ಳಿ ತಾವು ಹೇಳಿದ್ದೀರಿ

> "The Speaker shall determine the time when a sitting of the House shall be adjourned *sine die* or to a day or hour or part of the same day;
>
> Provided that the Speaker may, if he thinks fit, call a sitting of the House before the date or time to which it has been adjourned or at any time after the House has been adjourned *sine die*"

ಇಲ್ಲಿ ಹಿರಿಯರೇನು ಮಾತನಾಡಿದರು? 16ನೇ ತಾರೀಖಿನ ದಿವಸ ಸಭೆ ಕರೆಯಲ್ಪಡುತ್ತದೆ ಎಂಬುದನ್ನು ತಾವು ಪ್ರಕಟಣೆಗೊಳಿಸಿದ ಮೇಲೆ 14ನೇ ತಾರೀಖು ಸಭೆ ಕರೆಯಬೇಕಾದ ಅವಶ್ಯಕತೆ ಏನಿತ್ತು? ಆ ಅವಶ್ಯಕತೆಯ ಬಗ್ಗೆ ನಾವು 9ನೇ ತಾರೀಖಿನ ದಿವಸವೇ ನಾನು ಸಂಸದೀಯ ಮಂತ್ರಿಯಾಗಿ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ, "ವಿಧಾನ ಮಂಡಲದ ಬಜೆಟ್ ಅಧಿವೇಶನವನ್ನು ದಿನಾಂಕ 16 03 2007ರಿಂದ ಕರೆದಿರುವುದು ಸರಿಯಷ್ಟೆ ಈ ಮಧ್ಯೆ ಸರ್ಕಾರವು ಕೆಲವೊಂದು ಪ್ರಮುಖ ವಿಧೇಯಕಗಳನ್ನು ಆಯವ್ಯಯ ಮಂಡನೆ ಪೂರ್ವದಲ್ಲೇ ಚರ್ಚಿಸಿ, ಪರಿಶೀಲಿಸುವುದು ಅವಶ್ಯವೆಂದು ನಿರ್ಣಯಿಸಿ ವಿಧಾನ ಮಂಡಲದ ಅಧಿವೇಶನವು ದಿನಾಂಕ 14.03 2007ರಿಂದ ಸೇರುವುದು ಸೂಕ್ತವೆಂದು ಪರಿಗಣಿಸಿ ಸನ್ಮಾನ್ಯ ಸಭಾಧ್ಯಕ್ಷರನ್ನು ಕೋರಲು ತೀರ್ಮಾನಿಸಿದೆ ಆದ್ದರಿಂದ ವಿಧಾನಸಭೆಯ

ಅಧಿವೇಶನವನ್ನು ದಿನಾಂಕ 14 03 2007ರ ಪೂರ್ವಾಹ್ನ 11 ಗಂಟೆಗೆ ಕರೆಯಲು ಈ ಮೂಲಕ ಕೊರುತ್ತೇನೆ ಇದರೊಂದಿಗೆ ಸರ್ಕಾರಿ ಕಾರ್ಯಕಲಾಪಗಳ ಪರಿಷ್ಕೃತ ಪಟ್ಟಿಯನ್ನು ಅವಗಾಹನೆಗಾಗಿ ಇದರೊಂದಿಗೆ ಲಗತ್ತಿಸಿದ್ದೇನೆ, ಗೌರವಗಳೊಂದಿಗೆ" ಎಂದು ನಾನು ವಿನಂತಿ ಮಾಡಿದಮೇಲೆ, ತಾವು 9ನೇ ಮಾರ್ಚ್‌ರಂದು ಬುಲಟಿನ್‌ನನ್ನು ಕೊಟ್ಟಿದ್ದೀರಿ ದಿನಾಂಕ 25 01 2007ರಿಂದ ಪ್ರಾರಂಭವಾದ 12ನೇ ವಿಧಾನ ಸಭೆಯ ಐದನೇ ಅಧಿವೇಶನವು ದಿನಾಂಕ 16 3 2007ರಂದು ಮಧ್ಯಾಹ್ನ 12 30 ಗಂಟೆಗೆ ಸೇರುವಂತೆ ದಿನಾಂಕ 21 2 2007ರಂದು ಮುಂದೂಡಲ್ಪಟ್ಟಿತ್ತು ಆದರೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪತ್ರ ದಿನಾಂಕ 9 3 2007ರಲ್ಲಿ ತಿಳಿಸಿರುವ ರೀತ್ಯಾ, ಅಧಿವೇಶನವು 16 3 2007ರ ಬದಲಾಗಿ ದಿನಾಂಕ 14 3 2007ರಂದು ಬೆಳಿಗ್ಗೆ 11 00 ಗಂಟೆಗೆ ಪ್ರಾರಂಭವಾಗಲಿದೆಯೆಂದು ಈ ಮೂಲಕ ತಿಳಿಸಲಾಗಿದೆ

ತಾತ್ಕಾಲಿಕ ಪರಿಷ್ಕೃತ ಕಾರ್ಯಕ್ರಮದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆಯೆಂದು", ತಾವು ಒಂದು ಲಘು ಪ್ರಕಟಣೆಯನ್ನು ಹೊರಡಿಸಿದ್ದೀರಿ ಸನ್ಮಾನ್ಯ ಅಧ್ಯಕ್ಷರೆ, ಮಾಮೂಲಿಯಾಗಿ ಸಮನ್ಸ್‌ಗಳನ್ನು ಕಳುಹಿಸಿಕೊಡತಕ್ಕದ್ದು ಇದ್ದರೂ ಕೂಡ, ಅದು ನಮ್ಮ ನಿಯಮಾವಳಿಗಳ 3ರ ಪ್ರಕಾರ

> "The Secretary shall issue summons to each member specifying the date and place for a session of the House,
>
> Provided that when a session is called at short notice or emergently, summons may not be issued to each member separately but an announcement of the date and place of the session shall be published in the Gazette and made in the press and members may be informed by telegram."

So, ಇಲ್ಲಿ ಈ ವಿಚಾರದಲ್ಲಿ, 'ನಮಗೆ ಸಮನ್ಸೇ ಬರಲಿಲ್ಲ, ಪತ್ರಿಕೆಯಲ್ಲಿ ನೋಡಿದ್ದೇವೆ' ಎನ್ನುವುದು ಅವರಿಗೆ ಅಪಮಾನ ಮಾಡತಕ್ಕಂಥದ್ದಾಗಲಿ, ತಿಳಿಸದೇ ಇರತಕ್ಕಂಥದ್ದಾಗಲಿ ಅಲ್ಲ ಅಥವಾ ಸದನವನ್ನು ಅಪಮಾನಗೊಳಿಸುವಂತಹ ನಿರ್ಣಯವನ್ನೂ ಕೂಡ ತಾವು

ಮಾಡಿಲ್ಲ ಆದರೆ, ಮಾಮೂಲಿಯಾಗಿ ಯಾವುದಾದರೂ ಒಂದು ಅನಿರೀಕ್ಷಿತವಾದ ಅಥವಾ ಅತ್ಯಂತ ವಿಶೇಷವಾದ ಕೆಲವು ಮಸೂದೆಗಳನ್ನು ಮಂಡಿಸಲೇಬೇಕಾದಂತಹ ಅಗತ್ಯತೆ ಇದ್ದಾಗ, ಯಾವುದಾದರೂ ಲಘು ಪ್ರಕಟಣೆಗಳ ಮೂಲಕ, ಪತ್ರಿಕಾ ಹೇಳಿಕೆಯ ಮೂಲಕ, Telegramಅನ್ನೂ ಮತ್ತು Phonogram ಮೂಲಕವಾಗಿ ಅಧಿವೇಶನವನ್ನು ಕರೆಯತಕ್ಕಂಥ ಅಧಿಕಾರ ತಮಗೆ ನಿಯಮಾವಳಿ 3ರ ಪ್ರಕಾರ ಇದೆ ಅದರ ಪ್ರಕಾರ ತಾವು ನಡೆದುಕೊಂಡಿದ್ದೀರಿ ಯಾವುದು ಮುಖ್ಯ ಕಾರ್ಯಕಲಾಪಗಳು ನಡೆಸಬೇಕು ಎಂದು ನಾವು ಬರೆದ ಪತ್ರಕ್ಕೆ ತಾವು ಮಾನ್ಯತೆಯನ್ನು ಕೊಟ್ಟು ನಮ್ಮ ಕೋರಿಕೆಯನ್ನು ಮನ್ನಿಸಿ Bulletin ಕೂಡ ಹೊರಡಿಸಿದ್ದೀರಿ ಆದ್ದರಿಂದ ಇಲ್ಲಿ ನಿಯಮಾವಳಿಯನ್ನು ಮೀರಿ ನಡೆದಿರತಕ್ಕಂಥದ್ದು ಅಲ್ಲ ಅದೇ ರೀತಿಯಾಗಿ ಪಾರ್ಲಿಮೆಂಟನಲ್ಲಿ ಕೂಡ ತಾವು ಸದಸ್ಯರಾಗಿ ಕೆಲಸ ಮಾಡಿದಂಥವರು, ಆದ್ದರಿಂದ ಅನೇಕ ಕಡೆಗೆ ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡುವಾಗ, ಇಲ್ಲಿ ಕೌಲ್ ಅಡ್ ಶಕ್ದರ್‌ರವರ 5ನೇ editionನಲ್ಲಿ page 171ರಲ್ಲಿ ಹೇಳುತ್ತಾರೆ

> "The Speaker may, if he thinks fit call a sitting of the House before the date or hour to which it has been adjourned or at any time after the House has been adjourned *sine die* Information regarding the adjournment of the House *sine die* is issued in bulletin. Thrice the sitting of Lok Sabha has been called at a short notice before the date and time to which the House was adjourned."

ಆದ್ದರಿಂದ ಆವೊತ್ತಿನ ದಿವಸ ಸಭೆಯು ಮುಂದುವರೆದ ಸಭೆ, ಅದನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದುವರೆಸಿರತಕ್ಕದ್ದಲ್ಲ 16ನೇ ತಾರೀಖಿನ ದಿವಸ ಸಭೆಯನ್ನು ಮುಂದೂಡಲಾಗಿದೆಯೆಂದು ಆವತ್ತು ಪ್ರಕಟಿಸಲಾಗಿತ್ತು ನಾವು 9ನೇ ತಾರೀಖು ಬರೆದ ಪತ್ರದ ಆಧಾರದ ಮೇಲೆ ಅವಶ್ಯಕವಾಗಿರುವ ಕಾರಣಕ್ಕಾಗಿಯೇ ತಾವು ಬುಲಟಿನ್‌ನ್ನು ಹೊರಡಿಸಿದ್ದೀರಿ ನಮ್ಮದೇ ಆದ ನಿಯಮಾವಳಿಗಳ ಪ್ರಕಾರ ನಿಮ್ಮ ಕಚೇರಿ ಮತ್ತು ತಾವು ಘನವೆತ್ತ ಆ ಸ್ಥಾನದ ಮೂಲಕ ಆದೇಶ ಮಾಡಿರತಕ್ಕದ್ದು ಇಂಥ

ಉದಾಹರಣೆಗಳು ಇರುತ್ತವೆ ಎಂಬ ಕಾರಣಕ್ಕಾಗಿ, ಲೋಕಸಭೆಯಲ್ಲಿ ಕೂಡ ಇಂಥ ವಿಚಾರಗಳು ಪ್ರಸ್ತಾಪಕ್ಕೆ ಬಂದಿದೆ ಯಾವುದೇ ನಿಯಮಾವಳಿಗಳು ಕೈಗಳನ್ನು ಕಟ್ಟುವಂತಹದ್ದಾಗಬಾರದು ಆ ನಿಯಮಾವಳಿಗಳಿಗೆ ವ್ಯಾಪಕವಾಗಿರುವ ಅರ್ಥ ಮತ್ತು ಇಂಥ ಊಹಿಸಲಿಕ್ಕೆ ಸಾಧ್ಯವಿಲ್ಲದಂತಹ ಸನ್ನಿವೇಶಗಳು ಬಂದಾಗಲೂ ಕೂಡ ಯಾವ ನಿಯಮಾವಳಿಗಳನ್ನು ರಚನೆಯ ಮೂಲಕವಾಗಿ ಅದು ಸುಗಮವಾಗಿ ಕಾರ್ಯಕಲಾಪಗಳು ನಡೆಸಿಕೊಂಡು ಹೋಗಬೇಕೆಂಬ ಉದ್ದೇಶಕ್ಕಾಗಿಯೇ ಮಾಡಿರುವ ನಿಯಮಾವಳಿಗಳು, ಆ ಪ್ರಕಾರ ತಾವು ಮಾಡಿದ್ದೀರಿ ಮಾನ್ಯ ಮಾಧುಸ್ವಾಮಿಯವರು ಎತ್ತಿದಂತಹ ವಿಚಾರದಲ್ಲಿ "ಅಪಮಾನ ಮಾಡಿದ್ದೀರಿ, ನಿಮ್ಮ ಸ್ಥಾನಕ್ಕೆ ಅಪಮಾನವಾಗಿದೆ" ಎಂಬುದು ಅವರ ತಪ್ಪು ಗ್ರಹಿಕೆಯೆಂದು ನಾನು ಭಾವಿಸಿಕೊಂಡಿದ್ದೇನೆ

ಶ್ರೀ ಮುಲ್ಲಿಕಾರ್ಜುನ ಎಂ ಖರ್ಗೆ ಆ Chairಗೆ ಅಪಮಾನವಾಗಿಲ್ಲ ಹಾಗಾದರೆ ಯಾರಿಗೆ ಅಪಮಾನವಾಗಿದೆ?

ಶ್ರೀ ಎಂ ಪಿ ಪ್ರಕಾಶ್ ನಿಯಮಾವಳಿಗಳನ್ನು ಮೀರಿ ಮಾಡಿದಾಗ ಅದು ಅಪಮಾನ ಅಥವಾ arbitrary ಆಗಿ ತಮಗೆ ತಿಳಿದಂತೆ, ತೋಚಿದಂತೆ ವರ್ತನೆ ಮಾಡಿದಾಗ ಅದು ಅಪಮಾನಕರವಾದ ಸಂಗತಿ ಆದರೆ, ತೋಚಿದಂತೆ ನಡಯಲು ಸಾಧ್ಯತೆ ಇಲ್ಲದಿರುವುದರಿಂದ, ನಿಯಮಾವಳಿಗಳ ಪ್ರಕಾರ

ಶ್ರೀ ಕೆ ಆರ್ ರಮೇಶ್‌ಕುಮಾರ್ Unless substantiated by justification, is it not arbitrary?

ಶ್ರೀ ಎಂ ಪಿ ಪ್ರಕಾಶ್ Yes Justification is this ನಿಯಮಾವಳಿಗಳ ಪ್ರಕಾರ ಮಾಡಿದ್ದಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ What is the justification?

ಶ್ರೀ ಎಂ ಪಿ ಪ್ರಕಾಶ್ ಇಲ್ಲರೂ ಸಿಟ್ಟಿಗೆದ್ದರೆ ಹೇಳಲು ಆಗುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಪಾರ್ಲಿಮೆಂಟ್ ಸಚಿವರೇ 'deems fit' ಎನ್ನುವ ಪದಕ್ಕೆನೇ ನಾನು ಅವರನ್ನು explain ಮಾಡಿ ಎಂದು ಕೇಳಿದ್ದು 'if he deems fit' ನಾನೂ ಈ ಸಭೆ ಮಾಡಿರುವ ರೂಲ್ಸ್ ನೋಡಿಯೇ ಮಾತನಾಡುತ್ತಿದ್ದೇನೆ ಅಧ್ಯಕ್ಷರು ನಮಗೆ ಹೇಳಬೇಕು, it has been deemed fit under my consideration ಎಂದು ನಮಗೆ ಹೇಳಬೇಕಲ್ಲಾ?

ಎರಡನೆಯದ್ದು what is the emergency? ಎಂದು ಹೇಳಬೇಕು ಮೂರನೆಯದ್ದು ಬುಲಟಿನ್ ಇಸ್ಯೂ ಮಾಡಿದಮೇಲೆ ಇನ್ನೊಂದು ಬುಲಟಿನ್ ಏಕೆ ಇಸ್ಯೂ ಮಾಡಿದ್ದೀರಿ ಎಂದು ಕೇಳಿದ್ದೇನೆ Adjourn ಆದ Houseಗೆ ಅವರು ಬುಲಟಿನ್ ಇಸ್ಯೂ ಮಾಡಿದ್ದು ತಪ್ಪು ಎಂದು ನಾನು ಕೇಳಲಿಲ್ಲ You have already issued a bulletin from 16th Prepone ಮಾಡುವ emergencyಯನ್ನು ತಾವು ನಮಗೆ ಹೇಳಬೇಕು ನಾನು ಈ ಕಾರಣಕ್ಕಾಗಿ ಈ ಶಾಸನ ಸಭೆಯನ್ನು ತುರ್ತಾಗಿ ಕರೆಯುತ್ತಿದ್ದೇನೆಂದು ಒಂದು noticeನ್ನು ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ ಅದಕ್ಕಾಗಿಯೇ, ಬುಲೆಟಿನ್ನಲ್ಲಿ notice ಕೊಡತಕ್ಕ ಪ್ರಶ್ನೆ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ Bills ತಮಗೆ emergencyನಾ? ಇಲ್ಲಿ bills ಇಟ್ಟಿರುವುದು emergencyನಾ?

ಶ್ರೀ ಎಂ ಪಿ ಪ್ರಕಾಶ್ – ಸನ್ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯ ವಾಗಿರತಕ್ಕಂಥ ಮಸೂದೆಗಳ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದಕ್ಕಾಗಿ ತಾವು ತಮ್ಮ ಬುಲೆಟಿನ್‌ನಲ್ಲಿ ಈ ರೀತಿ ಹೇಳಿದ್ದೀರಿ

"ದಿನಾಂಕ 25 01 2007ರಿಂದ ಪ್ರಾರಂಭವಾದ 12ನೇ ವಿಧಾನಸಭೆಯ ಐದನೇ ಅಧಿವೇಶನವು ದಿನಾಂಕ 16 3.2007ರಂದು ಮಧ್ಯಾಹ್ನ 12 30 ಗಂಟೆಗೆ ಸೇರುವಂತೆ ದಿನಾಂಕ 21 2.2007ರಂದು ಮುಂದೂಡಲ್ಪಟ್ಟಿತ್ತು ಆದರೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪತ್ರ ದಿನಾಂಕ 9 3 2007ರಲ್ಲಿ ತಿಳಿಸಿರುವ ರೀತ್ಯಾ ಅಧಿವೇಶನವು 16 3 2007ರ ಬದಲಾಗಿ ದಿನಾಂಕ 14 3 2007ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಾರಂಭವಾಗಲಿದೆಯೆಂದು ಈ ಮೂಲಕ ತಿಳಿಸಲಾಗಿದೆ

ತಾತ್ಕಾಲಿಕ ಪರಿಷ್ಕೃತ 'ಕಾರ್ಯಕ್ರಮದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ

ಹಾಗೆ ಲಗತ್ತಿಸಲಾದಂತಹ ಪಟ್ಟಿ ಏನಿದೆ, ಅದರಲ್ಲಿ ಅತ್ಯಂತ ಜರೂರಾಗಿರತಕ್ಕಂಥ, ಅಗತ್ಯವಾಗಿ ಇರತಕ್ಕಂಥ ಮಸೂದೆಗಳನ್ನು ನಾವು ಮಂಡಿಸುತ್ತಿದ್ದೇವೆ, ಆದ್ದರಿಂದ ದಯವಿಟ್ಟು ಎರಡು ದಿವಸ ಮುಂಚಿತವಾಗಿ

ಕರೆಯಿರಿ ಎಂದು ಹೇಳಿದ್ದೆವು ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಘನತೆವೆತ್ತ ಸ್ಥಾನಕ್ಕೆ ಯಾವುದೇ ತರಹದ ಕುಂದಾಗದಂತೆ ನಿಯಮಾವಳಿಗಳ ಪ್ರಕಾರ ನಡೆದುಕೊಂಡಿದ್ದೀರಿ ನಿಯಮಬಾಹಿರವಾಗಿ ವರ್ತಿಸತಕ್ಕಂಥದ್ದು, ತಮ್ಮಷ್ಟಕ್ಕೆ ತಾವೇ ತಿಳಿದಂತೆ, ತೋಚಿದಂತೆ, ಮನಬಂದಂತೆ ನಡೆಸತಕ್ಕಂಥದ್ದು ಅಪಮಾನದ ಸಂಗತಿಯಾಗುತ್ತದೆಯೇ ವಿನಾ ಬೇರೆಯದಲ್ಲ ಇಲ್ಲಿ ಇರುವ ನಿಯಮಾವಳಿಗಳ ಪ್ರಕಾರ ತಾವು ನಡೆದುಕೊಂಡಿದ್ದೀರಿ ಇಲ್ಲಿ ಬುಲೆಟಿನ್ ಮೂಲಕ ತಿಳಿಸಬಹುದು ಎನ್ನತಕ್ಕಂಥದ್ದು ಇದೆ, ನೀವು ಹಿಂದೆ ಕರೆಯಬಹುದು ಅಥವಾ ಮುಂದಕ್ಕೆ ಹಾಕಬಹುದು ಎನ್ನತಕ್ಕಂಥದ್ದು ಇದೆ ಅದೇ ರೀತಿಯಾಗಿ ಲೋಕಸಭೆಯಲ್ಲೂ ಆಗಿರತಕ್ಕಂಥ ಉದಾಹರಣೆಗಳಿವೆ ನಮ್ಮ ನಿಯಮಾವಳಿ 15ರ ಪ್ರಕಾರವಾಗಿಯೂ ಸಹ ಕರೆಯಬಹುದಾಗಿದೆ ಮಾನ್ಯ ಮಾಧುಸ್ವಾಮಿಯವರು ನಿಯಮಾವಳಿಗಳನ್ನು ಉಲ್ಲೇಖಿಸಿ ಕಾನೂನು ಉಲ್ಲಂಘನೆಯಾಗಿದೆ ಎಂದು ಹೇಳಿದರು ಇದು ಸರಿಯಲ್ಲ ಇಲ್ಲಿ ಕರೆದಿರತಕ್ಕಂಥ ಅಧಿವೇಶನ ಕಾನೂನುಬದ್ಧವಾಗಿದೆ, ನಿಯಮಾವಳಿಗಳ ಪ್ರಕಾರವಾಗಿದೆ ಇವತ್ತು ನಮ್ಮ ಕಾರ್ಯಕಲಾಪಗಳು ಪ್ರಾರಂಭವಾಗುತ್ತಿವೆ ವಿತ್ತೀಯ ಕಾರ್ಯಕಲಾಪಗಳು 16ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ ಸಂಸದೀಯ ಮತ್ತು ಸರ್ಕಾರಿ ಕಾರ್ಯಕ್ರಮಗಳು ಪರಿಷ್ಕೃತ ಕಾರ್ಯಕ್ರಮ ಪಟ್ಟಿಯ ಪ್ರಕಾರ ನಡೆಯುತ್ತವೆ

ಶ್ರೀ ಡಿ ಕೆ ಶಿವಕುಮಾರ್ ಅದು ಹೇಗೆ ಎರಡನ್ನೂ ಬೇರೆ ಬೇರೆ ಮಾಡುವುದಕ್ಕಾಗುತ್ತದೆ? ಒಂದೇ ಆಗಿದ್ದರೆ ಸಾಕಾಗಿತ್ತು ತಾವು 'ವಿನಂತಿ' ಎನ್ನುವ ಬದಲು 'ಆದೇಶಿಸಿದ್ದೇವೆ' ಎಂದಿದ್ದರೆ ಸಾಕಾಗಿತ್ತು ಅದರಿಂದ ಅವರಿಗೂ ಸಮಸ್ಯೆ ಕಡಿಮೆಯಾಗುತ್ತಿತ್ತು

ಶ್ರೀ ಎಂ ಪಿ ಪ್ರಕಾಶ್ – ಹಿಂದೆ ತಾವು ಸಭೆ ನಡೆಸಿದ್ದಾಗ, ಹಿಂದೆ ಇದ್ದಂತಹ Speakerಗಳು ಯಾವ ರೀತಿಯಾಗಿ ನಡೆದುಕೊಂಡರು ಎಂಬುದು ಎಲ್ಲರಿಗಿಂತ ಚೆನ್ನಾಗಿ ತಮಗೆ ಗೊತ್ತಿರುವುದರಿಂದ ನಾನು ಅದನ್ನು ಇಲ್ಲಿ ಹೇಳಬೇಕಾದಂತಹ ಅಗತ್ಯವಿಲ್ಲ ನಾವು ಆದೇಶಿಸುವಂತಹ ಮಟ್ಟಕ್ಕೆ ಹೋಗುವುದಿಲ್ಲ ಆ ರೀತಿ ನಮ್ಮ ಆದೇಶ ಪರಿಪಾಲನೆ ಮಾಡತಕ್ಕಂಥ ರೀತಿಯಲ್ಲಿ ಕೂಡ

ಶ್ರೀ ಡಿ ಕೆ ಶಿವಕುಮಾರ್ – ಅವರು 'ಈ ಬಗ್ಗೆ ಸರ್ಕಾರವನ್ನೇ ಕೇಳೋಣ' ಎಂದು ನಿಮ್ಮ ಮೇಲೆ ಹಾಕುತ್ತಿದ್ದಾರಲ್ಲಾ

3/5

ಶ್ರೀ ಎಂ ಪಿ ಪ್ರಕಾಶ್ – ಹಾಗೇನಿಲ್ಲ ಈ ತರಹದ ಕಾರಣಕ್ಕಾಗಿಯೇ ಅವರೊಂದು ನಿರ್ಣಯಕ್ಕೆ ಬಂದು ಕಳುಹಿಸಿಕೊಟ್ಟಿದ್ದಾರೆ ಆದ್ದರಿಂದ ನಿಯಮಾವಳಿಗಳ ಪ್ರಕಾರವಾಗಿ ಈ ಅಧಿವೇಶನ ಕರೆಯಲ್ಪಟ್ಟಿದೆ ಯಾವ ಲೋಪದೋಷವನ್ನೂ ಕೂಡ ಮಾನ್ಯ Speakerರವರು ಮಾಡಿಲ್ಲ ಮತ್ತು ಅವರ ಕಛೇರಿಯವರೂ ಕೂಡ ಮಾಡಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ [ಶ್ರೀನಿವಾಸಪುರ] – ಸಾರ್, ಮಾನ್ಯ ಮಾಧುಸ್ವಾಮಿಯವರು ಮತ್ತು ನಾವು ಪ್ರಸ್ತಾಪ ಮಾಡಿದ ವಿಚಾರ ಬೇರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಕೊಟ್ಟಿರತಕ್ಕಂಥ ಉತ್ತರವೇ ಮತ್ತೊಂದು ತಮಗೆ ಅಧಿಕಾರವಿಲ್ಲವೆಂದು ನಾವು ಹೇಳಲಿಲ್ಲ ಆ ಅಂತರ್ಗತ ಅಧಿಕಾರ ತಮ್ಮಲ್ಲಿದೆ ನಾವು ಹೇಳಿದ್ದು ಇಷ್ಟೇ ಎರಡು ದಿವಸ ಮೊದಲೇ ಕರೆಯಬೇಕಾಗಿದ್ದರೆ ಕಾರಣವೇನಿತ್ತು? ಆ ಕಾರಣ ನೀವು ಇವತ್ತು ಕೊಟ್ಟಿರತಕ್ಕಂಥ ಅಜೆಂಡಾ ಏನಿದೆ ಅದರಲ್ಲಿ ಪ್ರತಿಬಿಂಬಿಸ ಬೇಕಾಗಿತ್ತು ಯಾವುದಾದರೂ ಒಂದು Ordinance ಇತ್ತು, ಒಂದು ವೇಳೆ hypothetically speaking, ಅದರ ಅವಧಿ ಮುಗಿದು ಹೋಗುತ್ತಿತ್ತು, ಅದು lapse ಆಗುತ್ತಿತ್ತು, ಅದಕ್ಕೋಸ್ಕರ ಕರೆದೆವು ಅಥವಾ ಯಾವುದಾದರೂ ಒಂದು urgent Government of Indiaದಿಂದ ಅಥವಾ Parliament ನಿಂದ ನಮಗೊಂದು Circular ಬಂದಿದೆ, Amendment ಒಂದನ್ನು introduce ಮಾಡಬೇಕಾಗಿದೆ ಅಥವಾ ರಾಜ್ಯದಲ್ಲಿ ಯಾವುದೋ ಒಂದು ಅನಾಹುತವಾಗಿದೆ, ತಕ್ಷಣ ನಾವು ನಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದಕ್ಕೆ ಸೇರಬೇಕು ಎನ್ನತಕ್ಕಂಥ ಸಂದರ್ಭವಿದ್ದು, ಅವರು ತಮಗೆ ಅದನ್ನು ಮನದಟ್ಟು ಮಾಡಿ, ತಮಗೆ ಅದು ಮನಸ್ಸಿಗೆ ಒಪ್ಪಿಗೆ ಆಗಿದ್ದರೆ, ಹೌದು, 16 ಸೇರುವ ಬದಲು 12ಕ್ಕೆ ಸೇರೋಣ, ಇದು ಬಹಳ ಮುಖ್ಯ ಅಥವಾ 14ಕ್ಕೆ ಸೇರೋಣ ಎಂದು ತಾವು ಹೇಳಿದ್ದರೆ ಪ್ರಶ್ನೆ ಮಾಡುವುದು ಇಲ್ಲಿ ಉದ್ಭವವಾಗುತ್ತಿರಲಿಲ್ಲ ಮಾಮೂಲಿಯಾಗಿರತಕ್ಕಂಥ ವಿಧೇಯಕಗಳನ್ನು ಮಂಡನೆ ಮಾಡಿ, ಚರ್ಚೆ ಮಾಡುವುದಕ್ಕೆ ವಿಶೇಷವಾದಂತಹ ಅಧಿಕಾರವನ್ನು ಬಳಸಿಕೊಳ್ಳತಕ್ಕಂಥದ್ದು ಸಮಂಜಸವೇ? ಅವರು ಇಷ್ಟು ಹೊತ್ತು ಹೇಳಿದಂತಹ ಉತ್ತರ, ಭಾಷಾ ಪಾಂಡಿತ್ಯದ ಪ್ರದರ್ಶನವಾಯಿತೇ ಹೊರತು ನಾವು ಎತ್ತಿದ ಸಮಸ್ಯೆಗಳಿಗೆ ಪರಿಹಾರ ಬರಲಿಲ್ಲ ನಾವು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದು ಇಷ್ಟೇ ಸರ್ಕಾರ ಈ ರೀತಿ ಮನಸ್ಸೋ ಇಚ್ಛೆ ಮಾಡುವುದು ಸರಿಯಲ್ಲ

ಮಾನ್ಯ ಮಾಧುಸ್ವಾಮಿಯವರು ಒಂದು ಮಾತನ್ನು ಇಲ್ಲಿ ಪ್ರಸ್ತಾಪ ಮಾಡಿದರು 12ನೇ ತಾರೀಖು Assembly ಪ್ರಾರಂಭವಾಗುತ್ತದೆಂದು ಮಾನ್ಯ ಸಭಾ ನಾಯಕರು ಹೊರಗಡೆ ಒಂದು ಹೇಳಿಕೆಯನ್ನು ಮಾಡಿದ್ದಾರೆ Assembly ಅಧಿವೇಶನದ ಬಗ್ಗೆ ತಾವು ಮತ್ತು ತಮ್ಮ ಕಛೇರಿಯ ಹೊರತಾಗಿ, ಯಾರು ಎಷ್ಟೇ ದೊಡ್ಡವರಾದರೂ ಕೂಡ ಪಕಟಣೆ ಮಾಡತಕ್ಕಂಥದ್ದು, ಅದಕ್ಕನುಗುಣವಾಗಿ ಇಲ್ಲಿ ಅಧಿವೇಶನ ನಡೆಯತಕ್ಕಂಥದ್ದು, ನಾವು ಮೊದಲೇ ನಿಶ್ಚಿಯ ಮಾಡಿರತಕ್ಕಂಥ ಕಾರ್ಯಕಮ ಅದಲು ಬದಲಾಗುವುದು,ಇದು ತಮ್ಮ ಸ್ಥಾನದ ಮೇಲೆ ಪರಿಣಾಮ ಬೀರುತ್ತದೆ ನಾವು ಅತ್ಯಂತ ಜಾಗತೆಯಿಂದ ಭಾಷೆ ಬಳಸುತ್ತಿದ್ದೇವೆ ನಾವು ಏನು ಹೇಳಿದೆವ್ರ ಎಂದರೆ, ಅವರ ಹತ್ತಿರ ಈಗ ಯಾವ ಆಧಾರವೂ ಇಲ್ಲ ಇಂತಹ ವಿಶೇಷ ಕಾರ್ಯಕಮವನ್ನು ಜರುಗಿಸಿಕೊಳ್ಳಲಿಕ್ಕೆ ಎರಡು ದಿವಸ ಮೊದಲೇ ನಾವು ಸಭೆಯನ್ನು ಕರೆದೆವು ಎಂದು ಸದನಕ್ಕೆ ಮನವರಿಕೆ ಮಾಡಿಕೊಡಲಿಕ್ಕೆ ಅಥವಾ ಸದನದ ಮುಖಾಂತರ ರಾಜ್ಯದ ಜನತೆಗೆ ಮನವರಿಕೆ ಮಾಡಿಕೊಡಲಿಕ್ಕೆ ಅವರ ಹತ್ತಿರ ಯಾವ ಆಧಾರವೂ ಇಲ್ಲ ಇದನ್ನೇ ನಾವು ಪರೋಕ್ಷವಾಗಿ ಹೇಳತಕ್ಕಂಥದ್ದು, ಎಲ್ಲೋ ಒಂದು ಕಡೆಗೆ ತಮ್ಮ ಮನಸ್ಸೋ ಇಚ್ಛೆ ನಡೆಸುತ್ತಿದ್ದಾರೆ, ಅಧ್ಯಕ್ಷ ಸ್ಥಾನದ ಸಾರ್ವಭೌಮತ್ವ ಏನಿದೆ, ಸದನದ ಸಾರ್ವಭೌಮತ್ವ ಏನಿದೆ, ಇದಕ್ಕೆ ಕುಂದು ಬರುತ್ತಿದೆ ಎಂದು ನಾನು ಖಂಡಿತ ಹೇಳುತ್ತೇನೆ ಅವರು ಹಿರಿಯರು ಮತ್ತು ಅನುಭವಿಗಳು ಅವರಿಗೆ ವಿಷಯ ಗೊತ್ತಿದೆ, ತಾವು ಎಡವಿದ್ದೇವೆ ಎಂದು ಅವರ ಮನಸ್ಸಿಗೆ ಬಂದಿದೆ ಆದರೂ ಕೂಡ ಇಜತ್ತಿಗಾಗಿ ತಮ್ಮ ವಾದವನ್ನು ಮಂಡಿಸಿದರೇ ಹೊರತು ನಾವು ಎತ್ತಿದಂತಹ ವಿಷಯಕ್ಕೆ ಅವರು ಉತ್ತರವನ್ನು ಕೊಡಲಿಲ್ಲ ನಾವು ಕೈಜೋಡಿಸಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ, ಇಂತಹ ಕಾರಣ ವಿಶೇಷವಾದಂತದ್ದು, "ನನ್ನ ಮನಸ್ಸಿಗೆ ಅಧ್ಯಕ್ಷನಾಗಿ ಅನಿಸಿತು, ಇದನ್ನು ಜರೂರತ್ತಾಗಿ ನಾವು ಚರ್ಚೆ ಮಾಡಬೇಕಾಗಿದೆ, ಆದ್ದರಿಂದ ಎರಡು ದಿವಸ ಮೊದಲೇ ಕರೆಯೋಣ ಎಂದು ಹೇಳಿ, ಅದಕ್ಕಾಗಿ ನಾನು ಕರೆದೆ" ಎಂದು ತಾವು ತಮ್ಮ ಸ್ಥಾನದಿಂದ ಆದೇಶ ಕೊಟ್ಟರೆ, ನಾವು ಸಮಾಧಾನಗೊಳ್ಳುತ್ತೇವೆ ಇಲ್ಲದೆ ಹೋದರೆ, ಅವರು ಕೊಟ್ಟಿರತಕ್ಕಂಥ ಉತ್ತರ ನೆಪ ಮಾತಕ್ಕೆ ಉತ್ತರವಾಗುತ್ತದೆಯೇ ಹೊರತು, ಅದು ಸದನದ ಗೌರವವನ್ನು ಎತ್ತಿ ಹಿಡಿಯುವುದಕ್ಕೆ ಸಹಾಯ ಮಾಡತಕ್ಕಂಥ ಉತ್ತರವಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ

ಅಧ್ಯಕ್ಷರು – ಯಾವ ಉದ್ದೇಶಕ್ಕಾಗಿ ಅಥವಾ ಯಾವ ವಿಚಾರಕ್ಕಾಗಿ ಸದನ ಕರೆಯಲಾಗಿದೆ ಎಂಬ ವಿಷಯವನ್ನು ಅವರು ಹೇಳಿದ್ದಾರೆ ಕೆಲವು ಮುಖ್ಯವಾಗಿರತಕ್ಕಂಥ ಬಿಲ್‌ಗಳು ಪಾಸ್ ಆಗಬೇಗಿದೆ, ಈಗ 16ನೇ ತಾರೀಖು ಬಜೆಟ್ ಇದೆ, ಅದರ ಪೂರ್ವದಲ್ಲಿಯೇ ಇದೆಲ್ಲಾ ಆಗಬೇಕಾಗಿರುವುದರಿಂದ ಕರೆಯಬೇಕು ಎಂದು ಸರ್ಕಾರ ನನ್ನಲ್ಲಿ ವಿನಂತಿ ಮಾಡಿತ್ತು ಕೆಲವು ಸಾರಿ ಅವಸರ ಅವಸರವಾಗಿ ಕೆಲವೊಂದು ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳಬೇಕಾಗಿರುತ್ತದೆ, ಅದು ಅಗತ್ಯವಾಗಿರುತ್ತದೆ, ಆ ಕಾರಣದಿಂದ ನಾವು ಸದನವನ್ನು ಕರೆದಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ಸಾರ್, ನಿಮ್ಮ ಗಂಭೀರ ಸ್ಥಿತಿಯನ್ನು ನಾವು ಅನುಭವಿಸಲಾರದೇ walk out ಮಾಡುತ್ತಿದ್ದೇವೆ

ಅಧ್ಯಕ್ಷರು ಇಲ್ಲಿ ಗಂಭೀರ ಸ್ಥಿತಿಯಿಲ್ಲ

[ಗೊಂದಲ]

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ ಸಿ ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು]

ಅಧ್ಯಕ್ಷರು – ಲೋಕಸಭೆಯಲ್ಲಿ ಈ ರೀತಿ ಅನೇಕ ಬಾರಿಯಾಗಿದೆ ಅವುಗಳು ಯಾವ್ಯಾವ ಸಂದರ್ಭದಲ್ಲಿ ಆಗಿದೆ ಎಂಬುದನ್ನೆಲ್ಲಾ ನಾನು ನೋಡಿದೆ ಆದ್ದರಿಂದ ಸರ್ಕಾರ ಏನೊಂದು ಮನವಿಯನ್ನು ಮಾಡಿದೆ, ಆ ಮನವಿಯನ್ನು ಪರಿಗಣನೆ ಮಾಡಿ ನಾನು ಈ ದಿನ ಸದನವನ್ನು ನಿಯಮಾವಳಿಗಳ ಪ್ರಕಾರ ಕರೆದಿದ್ದೇನೆ ಲೋಕಸಭೆಯಲ್ಲಿ ಈ ದಿಸೆಯಲ್ಲಿ ಏನೊಂದು ಸಂಪ್ರದಾಯಗಳನ್ನು ಹಾಕಿದ್ದಾರೋ, ಅದೆಲ್ಲವನ್ನೂ ನೋಡಿ ನಾನು ಕರೆದಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ನಾನೂ ಕೂಡ ಸಭಾತ್ಯಾಗ ಮಾಡುತ್ತಿದ್ದೇನೆ

[ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು]

ಅಧ್ಯಕ್ಷರು – Ordinance replacements ಇತ್ಯಾದಿಗಳೆಲ್ಲಾ ಅಜೆಂಡಾದಲ್ಲಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಮಾನ್ಯ ಅಧ್ಯಕ್ಷರೆ, ಒಂದು ಅಸತ್ಯವನ್ನು defend ಮಾಡುವುದಕ್ಕೆ ಇನ್ನೊಂದು ಅಸತ್ಯ ಹೇಳಬಾರದು

ಈಗ ಏನಾಗಿದೆ? ಎಲ್ಲಾ ಬಿಲ್‌ಗಳನ್ನು ಗಡಿಬಿಡಿಯಲ್ಲಿ ಪಾಸ್ ಮಾಡಬಾರದು ಎಂಬ ದೃಷ್ಟಿಯಿಂದ ಎರಡು ದಿವಸ ಮುಂಚೆಯೇ ನಾವು ಸದನ ಕರೆದಿದ್ದೇವೆ ಎಂಬ ಮಾತನ್ನು ತಾವು ಹೇಳಿದ್ದೀರಿ ಎರಡು ದಿವಸಗಳಲ್ಲಿ ಎಲ್ಲಾ ಬಿಲ್‌ಗಳ ಸವಿಸ್ತಾರವಾಗಿ ಚರ್ಚೆಯನ್ನು ಮುಗಿಸತಕ್ಕಂಥ ಸಾಧ್ಯತೆ ಇದೆಯೇ?

ಅಧ್ಯಕ್ಷರು ಗಡಿಬಿಡಿ ಏಕೆ ಬಂತು ಎಂದರೆ ಬಜೆಟ್ ಮಂಡನೆ ಪೂರ್ವದಲ್ಲಿಯೇ ಕೆಲವೊಂದು ordinance replacement ಇದೆ, ಇತ್ಯಾದಿಗಳೆಲ್ಲಾ ಇದೆ, ಆದ್ದರಿಂದ ಸದನ ಕರೆಯಬೇಕು ಎಂದು ಸರ್ಕಾರದವರು ಕೇಳಿದ್ದರು

ಶ್ರೀ ಮಲ್ಲಿಕಾರ್ಜುನ ಖರ್ಗೆ – ಎರಡು ದಿವಸದಲ್ಲಿ ಎಲ್ಲಾ ಬಿಲ್‌ಗಳನ್ನು ಸವಿಸ್ತಾರವಾಗಿ ಚರ್ಚೆ ಮಾಡಿ ಪಾಸ್ ಮಾಡತಕ್ಕ ಸಾಧ್ಯತೆ ಇದೆಯೇ? ಕಂದಾಯ ಇಲಾಖೆ ಬಿಲ್ ಇದೆ, ಇತರೆ ಬೇರೆ ಬೇರೆ ಬಿಲ್‌ಗಳಿವೆ, Home Minister ರವರೊಂದು ಬಿಲ್ ಅನ್ನು introduce ಮಾಡಿದ್ದಾರೆ, ಕಳ್ಳಭಟ್ಟಿ ಸಾರಾಯಿ, ಗೂಂಡಾಗಿರಿ ಇತ್ಯಾದಿಗಳ ಬಗ್ಗೆ ಕೂಡ ಬಿಲ್ ಇದೆ ಇವುಗಳೆಲ್ಲದ್ದರ ಬಗ್ಗೆ ಚರ್ಚೆಯಾಗಬೇಕು ಎಂದರೆ ಅದಕ್ಕೆ ಕನಿಷ್ಟ 3–4 ದಿವಸಗಳಾದರೂ ಬೇಕಾಗುತ್ತದೆ 16ನೇ ತಾರೀಖು ನೀವು ಬಜೆಟ್ ಮಂಡನೆ ಮಾಡುತ್ತೀರಿ 16ನೇ ತಾರೀಖು ಬಜೆಟ್ ಮಂಡನೆ ಮಾಡಿದ ಮೇಲೆ ಬಜೆಟ್ ಮೇಲೆ ಚರ್ಚೆ ಮಾಡಿ ಎಂದು ಹೇಳುತ್ತೀರಿ ಎರಡೇ ದಿವಸದಲ್ಲಿ ಇದರ ಬಗ್ಗೆ ಬಹಳ ಸವಿಸ್ತಾರವಾಗಿ, detail ಆಗಿ ಚರ್ಚೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ತಾವು ಹೇಳುತ್ತಿದ್ದೀರಲ್ಲಾ, ಇದು ಸಾಧ್ಯವೇ? ಅದನ್ನು ನೀವು defend ಮಾಡಿಕೊಳ್ಳಿ ಅವರು ನಿಮಗೆ ಒತ್ತಾಯ ಮಾಡಿ ಸದನ ಕರೆಯಿರಿ ಎಂದು ಹೇಳಿದ ಮೇಲೆ ನೀವು ಸದನವನ್ನು ಕರೆದಿದ್ದೀರಿ 'ನಾನು convince ಆಗಿದ್ದೇನೆ, ಅದಕ್ಕೋಸ್ಕರ ಈ ಸದನವನ್ನು ಕರೆದಿದ್ದೇನೆ' ಎಂಬ ಮಾತನ್ನು ತಾವು ಹೇಳಿ ಅವನ್ನು defend ಮಾಡಬೇಕಾಗಿಲ್ಲ ಅವರು ತಮ್ಮನ್ನು request ಮಾಡಿಕೊಂಡರು ತಾವು 'ನಾನು convince ಆಗಿದ್ದೇನೆ, ಅದಕ್ಕಾಗಿ ಈ ಬಿಲ್‌ಗಳನ್ನು ಚರ್ಚೆ ಮಾಡಲಿಕ್ಕೆ ಸದನ ಕರೆದಿದ್ದೇನೆ' ಎಂದು ಹೇಳಬೇಕು ಕಾವೇರಿ issue ಬಗ್ಗೆ ಚರ್ಚೆಯಾಗುವುದು ಸರ್ಕಾರಕ್ಕೆ ಇಷ್ಟವಿಲ್ಲ, ಆದ್ದರಿಂದ ಅದನ್ನು ಬಿಟ್ಟುಬಿಡಿ ಈ ಬಿಲ್‌ಗೋಸ್ಕರವೇ ನಾನು ಸದನ ಕರೆದಿದ್ದೇನೆ ಎಂಬುದನ್ನಾದರೂ ತಾವು ಹೇಳಿ

ಅಧ್ಯಕ್ಷರು – ನಾನು ಅದನ್ನು ಸ್ಪಷ್ಟವಾಗಿ ಹೇಳಿದ್ದೇನಲ್ಲಾ ಸರ್ಕಾರದ ವಿನಂತಿ ಮೇಲೆ ಕರೆದಿದ್ದೇನೆ ಮುಖ್ಯವಾದ ಕೆಲವೊಂದು ಮಸೂದೆಗಳು ಇರುವುದರಿಂದ ಸದನವನ್ನು ಕರೆಯಬೇಕೆಂದು ಏನೊಂದು ವಿನಂತಿಯನ್ನು ಅವರು ಮಾಡಿದರೋ, ಅದನ್ನು ಪರಿಗಣಿಸಿ ನಾನು ಸದನ ಕರೆದಿದ್ದೇನೆ ಲೋಕಸಭೆಯಲ್ಲಿ ಇಂಥದ್ದೇ ಅನೇಕ ಸಂಪ್ರದಾಯಗಳಿವೆ, ಅನೇಕ rulings ಗಳಿವೆ ಅದೆಲ್ಲವನ್ನೂ ಪರಿಗಣನೆ ಮಾಡಿ ಸದನವನ್ನು ಕರೆದಿದ್ದೇನೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನಲ್ಲಾ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಲೋಕಸಭೆಯಲ್ಲಿ ಇರಬಹುದು, Assembly ಯಲ್ಲಿ ಇರಬಹುದು, ಸಂದರ್ಭಾನುಸಾರ

ಅಧ್ಯಕ್ಷರು ಹೌದು ಸ್ವಾಮಿ ಇಂತದ್ದೇ ಸಂದರ್ಭಗಳಲ್ಲಿ ಅಲ್ಲಿ ಕರೆದಿದ್ದಾರೆ ಅದನ್ನೆಲ್ಲಾ ನೋಡಿಯೇ ಇಲ್ಲೂ ಕರೆದಿದ್ದೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಸಾರ್, ತಾವು ಬಜೆಟ್ ಪೂರ್ವದಲ್ಲಿಯೇ ಕೆಲವೊಂದು ಬಿಲ್‌ಗಳು ಪಾಸ್ ಆಗಬೇಕಾಗಿದೆ ಎಂದು ಹೇಳಿದಿರಿ ಅಷ್ಟೊಂದು urgent ಇದ್ದಂತಹ ಬಿಲ್‌ಗಳು ಯಾವುವು ಎಂದು ನಮಗೆ ಗೊತ್ತಾಗಲಿಲ್ಲ ಅಂತಹ ಬಿಲ್‌ಗಳು ಯಾವುವೂ ಇಲ್ಲ ಬಜೆಟ್‌ಗೆ consequential ಆಗಿ ಪಾಸ್ ಆಗಬೇಕಾಗಿರುವಂಥಾದ್ದು ಯಾವುದೂ ಇಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಸನ್ಮಾನ್ಯ ಅಧ್ಯಕ್ಷರು, ಸಂಪೂರ್ಣ ಸಮಾಧಾನವಾಗಿ, ಹಸನ್ಮುಖಿಗಳಾಗಿ, ಸಂತೃಪ್ತರಾಗಿ, ಅವರು ಮನವಿ ಕೊಟ್ಟರು, ನಾನು ಒಪ್ಪಿಕೊಂಡೆ ಎಂದು ಹೇಳಿದ್ದೀರಿ ನಮ್ಮ ಅಧ್ಯಕ್ಷರು, ನೀವು ಸಮಾಧಾನವಾಗಿದ್ದರೆ ನಾವೆಲ್ಲಾ ಖುಷಿಯಾಗಿರುತ್ತೇವೆ, ನಮಗೇನು ಚಿಂತೆ ಇಲ್ಲ, ನಾವು ಸಮಧಾನಗೊಂಡಿರುತ್ತೇವೆ ಅವರು ಈ ಸ್ಥಿತಿಯಲ್ಲಿರಬೇಕೆಂಬುದು ಅವರ ಇರಾದೆಯಾದರೆ ನಮ್ಮ ಸಂಪೂರ್ಣ ಸಹಮತ ಅದಕ್ಕೆ ಇದೆ ನಮ್ಮದೇನು ಆಕ್ಷೇಪಣೆ ಇಲ್ಲ

ಶ್ರೀ ಎಂ ಪಿ ಪ್ರಕಾಶ್ ಅವರು, ಎಷ್ಟು ಹಸನ್ಮುಖಿಗಳು, ಸಮಾಧಾನವಾಗಿರಬೇಕೆಂದು ಬಯಸುತ್ತೇವೆಯೋ, ನೀವು ಸಮಾಧಾನವಾಗಿದ್ದರೆ ಅದು ನಮಗೆ ಸಮಾಧಾನ

ಶ್ರೀ ಕೆ ಆರ್ ರಮೇಶ್ ಕುಮಾರ್ ತಮ್ಮ ಪ್ರಕಾರ, ಗೃಹಮಂತ್ರಿಗಳ ಕೃಪೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಗೃಹ ಮಂತ್ರಿಗಳಿಗೆ ಗಹವಿಡಿದಿದೆ, ಅವರದ್ದು ಇದೇ ಕೆಲಸ ಪಾಪ, ತಪ್ಪು ಮಾಡುವುದು, ಮತ್ತೆ ಡಿಫೆಂಡ್ ಮಾಡುವುದು, ತಪ್ಪಾಗುವುದು ಮತ್ತೆ ಡಿಫೆಂಡ್ ಮಾಡುವುದು, ಎಷ್ಟು ಸಲ ಮಾಡುತ್ತೀರಿ ಅದಕ್ಕೆ ಕನ್ನಡದಲ್ಲಿ ನಮ್ಮ ಕಡೆ ಒಂದು ಗಾದೆ ಮಾತಿದೆ, ಜನಕ್ಕೆ ಮಾಡಿದ್ದು ಉಪಕಾರವಲ್ಲ, ಹೆಣಕ್ಕೆ ಮಾಡಿದ್ದು ಶೃಂಗಾರವಲ್ಲವೆನ್ನುವ ಹಾಗೆ ಇವತ್ತೆಲ್ಲಾ ತಪ್ಪು ಮಾಡುವುದು ಅದನ್ನು ಡಿಫೆಂಡ್ ಮಾಡುತ್ತಾ ನಿಲ್ಲುವುದು

ಶ್ರೀ ಎಂ ಪಿ ಪ್ರಕಾಶ್ ಇಲ್ಲಿ ಮಹಿಳಾ ಸದಸ್ಯರು ಕೂಡ ಇದ್ದಾರೆ, ಆದುದರಿಂದ ಆ ರೀತಿ ಗಾದೆ ನಿಮ್ಮ ಕಡೆಗೆ ಇರಬಹುದು, ನಮ್ಮ ಕಡೆಗೆ ಇರುವುದು, "ಊರು ಉಪಕಾರವರಿಯದು, ಹೆಣ ಶೃಂಗಾರವರಿಯದು" ಎಂದಿದೆ ಆದುದರಿಂದ ಊರಿಗೆ ಎಷ್ಟು ಉಪಕಾರ ಮಾಡಿದರು ಹಿಂದೆ ಮಾತನಾಡುವುದು ಇದ್ದಿದ್ದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ One famous quote ನನಗೆ ಜ್ಞಾಪಕಕ್ಕೆ ಬಂತು, "Cowardice of an honest man gives rise to the birth of a scoundrel." I thought I would bring this to your kind notice

ಶ್ರೀ ಎಂ ಪಿ ಪ್ರಕಾಶ್ I would also bring to your kind notice that, "politics is the last resort of a scoundrel." ಅಂತನೂ ಹೇಳಿದ್ದಾರೆ ಅದಕ್ಕಾಗಿಯೇ ನಾವೆಲ್ಲರು ನೆನೆಸಿಕೊಂಡಿದ್ದೇವೆ, ಆದುದರಿಂದ ಅದೊಂದೆ ಗಾದೆ ಮಾತಲ್ಲ ಈ ಗಾದೆ ಮಾತು ಕೂಡ ಇದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ Let us put the records straight. That I did not deny. We all willfully chosen to be this The Cowardice of an honest man gives birth to a scoundrel ನಾನು ತಮಗೆ ಹೇಳಿದ್ದುಇಷ್ಟೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಮಗೆ ಅರ್ಥವಾಗುತ್ತಿಲ್ಲ, ಏಕೆಂದರೆ, ನೀವಿಬ್ಬರು ಕಾನೂನಿನಲ್ಲಿ ಪಂಡಿತರಿದ್ದೀರಿ Who is the scoundrel he has given birth?

ಶ್ರೀ ಎಂ ಪಿ ಪ್ರಕಾಶ್ ಅಲ್ಲ, ಹಾಗೆ ಆಗಿಬಿಡುತ್ತೇವೆಂದು ಅಷ್ಟೆ, ನಿಜ ಸರ್, ತಾವು ಹೇಳಿದಂತೆ, "ರಾಜಕಾರಣಿಯ ಕೊನೆಯ ರಾವು

ಮುಟ್ಟಾಳತನ" ಎನ್ನುವುದನ್ನು ತಾವು ಹೇಳಿದಿರಿ, ಅದು ನಮ್ಮ ಗಾದೆ ಮಾತು ಕೂಡ ಆಗಿದೆ ಯಾರು ಹೇಡಿಗಳಾಗಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ, ಒಬ್ಬ ಅಂತಹ ಮುಟ್ಟಾಳನನ್ನು ಸೃಷ್ಟಿ ಮಾಡುತ್ತಾರೆ ಅಂದರೆ ಅವನೇ ಸೃಷ್ಟಿಯಾಗುತ್ತಾನೆ ಆ ಕಾರಣಕ್ಕಾಗಿ ನಾವೆಲ್ಲರೂ ಮುಟ್ಟಾಳರಾಗಿರುವುದು ಯಾರು ಏನು ನಮಗೆ ಆರತಿ ಬೆಳಗಿ ನೀನು ರಾಜಕಾರಣದಲ್ಲಿದ್ದು ದೇಶ ಸೇವೆ ಮಾಡಪ್ಪ ಎನ್ನಲಿಲ್ಲ ನಾವು ಆ ಕಾಲಕ್ಕೆ ಅನುಗುಣವಾದ ರೀತಿಯಲ್ಲಿ ನಮ್ಮ ನಿಯಮಾವಳಿಗಳನ್ನು, ನಮ್ಮ ನಡತೆಗಳನ್ನು, ನಮ್ಮ ವಿಚಾರಗಳನ್ನು ಬದಲಿಸುತ್ತಾ, ಬದಲಿಸುತ್ತಾ, ಇಲ್ಲಿರುವವರು ಅಲ್ಲಿ, ಅಲ್ಲಿರುವವರು ಇಲ್ಲಿ, ಇಲ್ಲಿ ಇಲ್ಲದೇ ಇರುವವರು ಮತ್ತೆಲ್ಲೊ ಈ ತರಹದಲ್ಲಿರುವುದರಿಂದ ನಾವೆಲ್ಲರೂ ಮುಟ್ಟಾಳರಾಗಿದ್ದೇವೆಂದು ಹೇಳಿದ್ದೇನೆ

ಶ್ರೀ ಎಸ್ ಎಸ್ ಪಾಟೀಲ್ ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ನಡೆದಂತಹ ಚರ್ಚೆ, ಮಾನ್ಯ ರಮೇಶ್‌ಕುಮಾರ್‌ರವರೆ ನೀವೆಲ್ಲಾ, ದಣಿದುಕೊಂಡದ್ದೆಲ್ಲಾ ಏನಾಯಿತೆಂದರೆ, ಸರ್ವಜ್ಞ ಹೇಳುವಂತೆ, ಬೋರ್ಗಲ್ಲ ಮೇಲೆ ನೀರುಗರೆದರೆ, ಆ ಕಲ್ಲು ನೀರು ಕುಡಿಯುವುದೇ ಸರ್ವಜ್ಞ ಎನ್ನುವಂತಾಯಿತು ಅದು ಇರಲಿ, ಸರ್ವಜ್ಞನ ಮಾತಿನಂತೆ ಮಾನ್ಯ ಪ್ರಕಾಶರವರು ಈಗ ಬೋರ್ಗಲ್ಲಾಗಿಬಿಟ್ಟಿದ್ದೀರಿ, ಏನು ಮಾಡುವುದಕ್ಕಾಗುವುದಿಲ್ಲ ಆ ಕಾರಣಕ್ಕೆ ಅಧ್ಯಕ್ಷರೆ, ಮುಂದೆ ಒಳ್ಳೆಯ ವಿಷಯವಾದ ಕಾವೇರಿ ಬಗ್ಗೆ ಚರ್ಚೆ ಮಾಡಲು ನಿರ್ಣಯ ಮಂಡಿಸಿದ್ದೇವೆ ದಯವಿಟ್ಟು ಇದನ್ನೆಲ್ಲಾ ಬಿಡಿ, ಕಾವೇರಿ ಚರ್ಚೆಯನ್ನು ಪ್ರಾರಂಭ ಮಾಡಿ ಎಂದು ನಾನು ಸರ್ಕಾರವನ್ನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಮಾನ್ಯ ಎಂ ಪಿ ಪ್ರಕಾಶ್‌ರವರು ಹೇಳಿದ್ದನ್ನು ಸ್ವಲ್ಪ ಕರೆಕ್ಷನ್ ಮಾಡಿಕೊಳ್ಳಬೇಕು, ಅವರು ಹೇಳುವಂತೆ ಎಲ್ಲರೂ ಅಲ್ಲ

Sri M P Prakash: It is an art of the possible Politics is also an art of the possible ಯಾರಿಗೆ ಅದನ್ನು ನಿಭಾಯಿಸಿಕೊಂಡು ಹೋಗಲು ಸಾಧ್ಯವೋ ಅಂತಹವರಿಗೆ ಮಾತ್ರ ಎಲ್ಲರಿಗೂ possible ಆಗುವುದಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ Art of possibility is with regard to Napoleon. It was referred to as the earlier one with reference to Hitler

ಶ್ರೀ ಎಂ ಪಿ ಪ್ರಕಾಶ್ – Again Napoleon also knew that nobody was hero to his wallet.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಇವರಿಬ್ಬರೇ ಮಾತನಾಡಿಕೊಂಡರೆ ನಮಗೆ ಅರ್ಥವಾಗುತ್ತಿಲ್ಲ, ಆದುದರಿಂದ ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ, ಸ್ಕೌಂಡ್ರಲ್ ಯಾರು, ಹಿಟ್ಲರ್ ಯಾರು ಆಮೇಲೆ ನೆಪೋಲಿಯನ್ ಯಾರು? ನಮಗೆ ಇದೆಲ್ಲಾ ಅರ್ಥವಾಗಬೇಕಲ್ಲ, ಇವರು [ಮಾನ್ಯ ರಮೇಶ್ ಕುಮಾರು] ಹೇಳಿ ಹೊರಗೆ ಹೋಗುತ್ತಾರೆ, ಅವರು [ಮಾನ್ಯ ಎಂ ಪಿ ಪ್ರಕಾಶ್] ಹೇಳಿ ನಗುತ್ತಾ ಕುಳಿತುಕೊಳ್ಳುತ್ತಾರೆ, ಈ ಸದನದ ಸಮಯ ವೇಸ್ಟ್ ಆಗಲಿಲ್ಲವೇ ಅಧ್ಯಕ್ಷರೆ?

ಶ್ರೀ ಎಂ ಪಿ ಪ್ರಕಾಶ್ ಸಾರಿ ಸರ್

ಶ್ರೀ ಮಹಿಮಾ ಜೆ ಪಟೇಲ್ ಮಾನ್ಯ ರಮೇಶ್ ಕುಮಾರ್‌ರವರು, ನೀವು ಸರಿಯಾಗಿ ಕೆಲಸ ಮಾಡದೇ ಇದ್ದರೆ ಕಾಂಗ್ರೆಸ್ ಪವರ್‌ಗೆ ಬರುತ್ತದೆ ಎನ್ನುವುದನ್ನು ಆ ರೀತಿಯಾಗಿ ಹೇಳಿದರೆಂದು ಕಾಣಿಸುತ್ತದೆ

ಅಧ್ಯಕ್ಷರು ಈಗ ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿರ್ಣಯವನ್ನು ಓದಿ ಹೇಳಿದರು, ನಿರ್ಣಯವನ್ನು ಕಳುಹಿಸಿದ್ದಾರೆ, ನಿಯಮಾವಳಿಗಳ ಪ್ರಕಾರ ತಕ್ಷಣಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದಕ್ಕೆ ಕಾವೇರಿ ಬಗ್ಗೆ ಸರ್ಕಾರ ಹೇಳಬೇಕು

(ಆ) ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ

ಶ್ರೀ ಎನ್ ಧರ್ಮ್‌ಸಿಂಗ್ [ವಿರೋಧ ಪಕ್ಷದ ನಾಯಕರು] ಇಲ್ಲಿಯವರೆಗೆ ನಮ್ಮ ಎಲ್ಲಾ ಹಿರಿಯ ನಾಯಕರು ಪ್ರಸ್ತಾಪ ಮಾಡಿದರು ಇವತ್ತು 14ನೇ ತಾರೀಖು ಅಧಿವೇಶನವನ್ನು ಕರೆಯುವ ಪ್ರಮೇಯವಿರಲಿಲ್ಲ, ಆದರೂ ಕೂಡ ನೀವು ಕರೆದಿದ್ದೀರೆಂದು ನಿಮಗೆ ಗೌರವವನ್ನು ಕೊಟ್ಟಿದ್ದೇನೆ ಕಳೆದ ಸಲ ಅಜೆಂಡಾದಲ್ಲಿ ಏನು ಬಿಲ್ಲುಗಳಿದ್ದವೋ ಅವೇ ಬಂದಿವೆ ವಿಶೇಷವಾದ ಪರಿಸ್ಥಿತಿಯಲ್ಲಿ ಸದನವನ್ನು ಕರೆದಿದ್ದೇನೆ, ಚರ್ಚೆಯಾಗಬೇಕೆನ್ನುವ ರೀತಿಯಲ್ಲಿ, ಇದು ಸಮರ್ಥನೀಯವಾದುದ್ದಲ್ಲ ಆದರೂ ಕೂಡ ತಾವು ಅಧ್ಯಕ್ಷರಿದ್ದೀರೆಂದು ಗೌರವವನ್ನು ಕೊಡಬೇಕಾಗುತ್ತದೆ,

7/6